# ಗಣಿತ

# MATHEMATICS

## ತರಗತಿ III

## ಭಾಗ 1

## Part - I

ಕೇರಳ ಸರಕಾರ
ಶಿಕ್ಷಣ ಇಲಾಖೆ

ತಯಾರಿಸಿದವರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT), ಕೇರಳ
**2015**

JT331-1/Maths - 3(K) Vol-1

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠಾ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವ ಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ನನ್ನ ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

**State Council of Educational Research and Training (SCERT)**
Poojappura, Thiruvananthapuram 695012, Kerala

*Website* : www.scertkerala.gov.in
*e-mail* : scertkerala@gmail.com
Phone : 0471 - 2341883, Fax : 0471 - 2341869
Typesetting and Layout : SCERT
Printed at : KBPS, Kakkanad, Kochi-30
© Department of Education, Government of Kerala




ಪ್ರೀತಿಯ ಮಕ್ಕಳೇ,

ಸಂಖ್ಯೆಗಳು! ಆಕೃತಿಗಳು! ನಮೂನೆಗಳು!
ಗಣಿತದ ಒಂದು ಹೊಸ ಲೋಕಕ್ಕೆ ನಾವು ಸಾಗುತ್ತಿರುವೆವು.
ಲೆಕ್ಕ ಮಾಡಲು, ಆಡಲು, ಪದ್ಯ ಹಾಡಲು
ನಾವು ಗಣಿತವನ್ನು ಉಪಯೋಗಿಸುವ.
ಗೆಳೆಯರೊಂದಿಗೆ ನಲಿಯುತ್ತಾ ಕಲಿಯುತ್ತಾ
ಹೊಸ ಸಂಶೋಧನೆಯನ್ನು ಮಾಡುತ್ತಾ,
ತಪ್ಪುಗಳನ್ನು ತಿದ್ದಿ ಮುಂದಕ್ಕೆ ಸಾಗುವ...
ಹೊಸ ಗಣಿತಾನುಭವಗಳನ್ನು ಹುಡುಕಿ
ಆತ್ಮ ವಿಶ್ವಾಸದೊಂದಿಗೆ...

ಶುಭ ಹಾರೈಕೆಯೊಂದಿಗೆ,

**ಡಾ. ಎಸ್. ರವೀಂದ್ರನ್ ನಾಯರ್**
ನಿರ್ದೇಶಕರು
ಎಸ್.ಸಿ.ಇ.ಆರ್.ಟಿ.



# TEXTBOOK DEVELOPMENT TEAM

## PARTICIPANTS

**Ashraf C.V.**
Asst. Teacher, Vanimel UPS,
Kozhikkode

**Unnikrishnan M.V.**
HSA, GHS Kumbla, Kasaragod

**Prasanth K.P.**
UPSA, Devadar UP School, Nediyirupp,
Malappuram

**Narayananunni M.P.**
Lecturer, DIET Palakkad

**Vasu K.G.**
AEO (Rtd.) Tirur

**Syam Kumar**
HSA, JNHS Kadukulanhi

**Sambasivan**
Master Trainer, IT@School
Thiruvananthapuram

**Suresh C.**
Trainer, BRC Thanur,
Malappuram

### Experts

**Baiju S.**
Asst. Prof., Govt. College,
Karyavattam
Thiruvananthapuram

**Dr. Radhakrishnan Chettiyar**
Prof. (Rtd) University College,
Thiruvananthapuram

### Artists

**Kunhiraman P.C.,** DIET Ernakulam
**Rakesh** , Neyyar Dam, Thiruvananthapuram
**Paulose M.K.,** Govt. HSS, Perumbavoor, Ernakulam
**Harikumar K.B.,** Kazhakoottam, Thiruvananthapuram
**Hari Charutha,** Nemam, Thiruvananthapuram
**Hassan K.M.,** GHS Pezhakkappilli, Ernakulam

### Academic Co-ordinator

**Dr. Lidsonraj J.,** Research Officer, SCERT, Thiruvananthapuram

## KANNADA VERSION

### Participants

**Shrihari N.,** HSA Maths, SGKHS Kudlu
**Ananthakrishna M.,** P.D. Teacher, GUPS Kasaragod
**Prapullachandra C.H.,** HSA Maths, GHSS Belluru
**Yoosuf K.,** P.D. Teacher, GHSS Adhur

### Language Expert

**Shridhara N.,** Asst. Prof., Dept. of Kannada, Govt. College, Kasaragod

### Subject Expert

**Nandikeshan N.,** Headmaster, GHS Udyawara.

### Co-ordinator

**Arun Jyothi S., Research Officer, SCERT.**

**State Council of Educational Research and Training (SCERT)**
Vidyabhavan, Poojappura, Thiruvananthapuram-695012



# ಅನುಕ್ರಮಣಿಕೆ


1. ನೂರಕ್ಕೂ ಆಚೆಗೆ ............................... 07
2. ಒಟ್ಟು ಸೇರಿಸುವ ................................ 21
3. ತೆಗೆಯುವ .......................................... 33
4. ಆಕೃತಿಗಳು ಸೇರುವಾಗ ......................... 47
5. ಸಮಾನರು ಒಟ್ಟಾಗುವಾಗ ..................... 63
6. ಸಮಯ ಮತ್ತು ಕಾಲ ........................... 75

**ಈ ಪುಸ್ತಕದಲ್ಲಿ ಅನುಕೂಲಕ್ಕಾಗಿ ಕೆಲವು ಸಂಕೇತಗಳನ್ನು ಉಪಯೋಗಿಸಲಾಗಿದೆ.**



ಹೆಚ್ಚಿನ ಚಟುವಟಿಕೆ/
ಮುಂದುವರಿದ ಚಟುವಟಿಕೆ



ನಾನು ಕಂಡುಕೊಂಡ ವಿಧಾನ



ಸಹಪಾಠಿಗಳು ಕಂಡುಕೊಂಡ ವಿಧಾನ



ಮೌಲ್ಯನಿರ್ಣಯ


# 1


# ನೂರಕ್ಕೂ ಆಚೆಗೆ

## ನೂರನೇ ವಾರ್ಷಿಕೋತ್ಸವ

ಆದಿರಾಳ ಶಾಲೆ ಸ್ಥಾಪನೆಯಾಗಿ 99 ವರ್ಷಗಳಾದವು. ಮುಂದಿನ ವರ್ಷ ಶತಮಾನೋತ್ಸವವನ್ನು ಆಚರಿಸಲು ತೀರ್ಮಾನಿಸಲಾಯಿತು. ವಾರ್ಷಿಕೋತ್ಸವಕ್ಕಾಗಿ ಎಲ್ಲಾ ಮಕ್ಕಳ ಮನೆಗಳಲ್ಲೂ ಸಹಾಯಧನ ಪೆಟ್ಟಿಗೆಗಳನ್ನು ಸ್ಥಾಪಿಸಲಾಗಿದೆ. ಆದಿರಾಳು ಸಹಾಯಧನ ಪೆಟ್ಟಿಗೆಯನ್ನು ತೆರೆದು ನೋಡಿದಳು.

ಪೆಟ್ಟಿಗೆಯಲ್ಲಿರುವ ನಾಣ್ಯಗಳೆಲ್ಲವೂ 1 ರೂಪಾಯಿಯದ್ದು.
ಆದಿರ ಪೆಟ್ಟಿಗೆಯಲ್ಲಿರುವ 1 ರೂ. ನಾಣ್ಯಗಳನ್ನು 10ರ ಗುಂಪುಗಳಾಗಿ ಮಾಡಿದಳು.



10 ರ ಎಷ್ಟು ಗುಂಪುಗಳು? ☐

ಒಟ್ಟು ಎಷ್ಟು ನಾಣ್ಯಗಳು? ☐


ತಾಯಿ ಅವಳಿಗೆ 1 ರೂಪಾಯಿಯ ಒಂದು ನಾಣ್ಯವನ್ನು ಸಹ ಕೊಟ್ಟಳು.

ಈಗ ಒಟ್ಟು ಎಷ್ಟು ಒಂದು ರೂಪಾಯಿಗಳಾದುವು? ☐

ಆದಿರ ಈ ನಾಣ್ಯಗಳನ್ನೆಲ್ಲ ಅಂಗಡಿಯಲ್ಲಿ ಕೊಟ್ಟು ನೋಟುಗಳನ್ನಾಗಿ ಮಾಡಿದಳು.

ಅಂಗಡಿಯವನು ಕೊಟ್ಟದ್ದೆಲ್ಲಾ 10 ರೂಪಾಯಿಯ ನೋಟುಗಳಾಗಿದ್ದುವು.

ಎಷ್ಟು 10 ರೂಪಾಯಿಯ ನೋಟುಗಳು ಲಭಿಸಿರಬಹುದು? ☐



## ಯಾವೆಲ್ಲಾ ನೋಟುಗಳು?

100 ಒಂದು ರೂಪಾಯಿ ನಾಣ್ಯಗಳನ್ನು ಯಾವ ಯಾವ ರೀತಿಯಲ್ಲಿ ನೋಟುಗಳಾಗಿ ಮಾಡಬಹುದು?

ಎಲ್ಲವೂ 50 ರೂಪಾಯಿಯ ನೋಟುಗಳಾದರೋ? ನೋಟುಗಳೆಷ್ಟು?



## ಪೂರ್ತಿಗೊಳಿಸಬಹುದೇ?

ಆದಿರಾಳಿಗೆ ಅವಳ ತಂದೆ ಒಂದು 100 ರೂಪಾಯಿಯ ನೋಟನ್ನು ನೀಡಿದರು.

ಅವಳ ಕೈಯಲ್ಲಿ 1 ರೂಪಾಯಿಯ ನಾಣ್ಯವಿತ್ತು.


100 ರೊಂದಿಗೆ 1 ಸೇರಿದಾಗ ನೂರ ಒಂದಾಯಿತು. **100 + 1 = 101**


ಇನ್ನು ನೀವು ಪಟ್ಟಿಯನ್ನು ಪೂರ್ತಿಗೊಳಿಸುವಿರಾ?

| | | |
|---|---|---|
| | | 100 + 1 = 101 |
| | | 100 + 2 = 102 |
| | | 100 + 3 = 103 |
| | | |
| | | |
| | | |
| | | |
| | | |
| | | |
| | | 100 + 10 = 110 |

## ಹತ್ತು ನೂರುಗಳು

ನೂರನೇ ವಾರ್ಷಿಕೋತ್ಸವಕ್ಕಾಗಿ ಒಂದು ದಿವಸ 10 ಮಕ್ಕಳು 100 ರೂಪಾಯಿಯಂತೆ ಧನ ಸಹಾಯ ನೀಡಿದರು. ಪ್ರತಿಯೊಬ್ಬರೂ ಕೊಟ್ಟ ಹಣದ ಮೊತ್ತದ ಪಟ್ಟಿಯನ್ನು ಪೂರ್ತಿಗೊಳಿಸಬಹುದೇ?

| | | |
|---|---|---|
|  | 100 | |
|  | 200 | |
|  | 300 | ಮುನ್ನೂರು |
| 4 ನೂರುಗಳು | 400 | |
| 5 ನೂರುಗಳು | | ಐನೂರು |
| 6 ನೂರುಗಳು | | |
| | 700 | |
| | 800 | ಎಂಟುನೂರು |
| 9 ನೂರುಗಳು | | ಒಂಬೈನೂರು |
| | 1000 | |





## ಗಿಡಗಳನ್ನು ನೆಡುವ

ನೂರನೇ ವಾರ್ಷಿಕೋತ್ಸವಕ್ಕೆ ಶಾಲಾ ವಠಾರದಲ್ಲಿ ನೆಡಲು 100 ಗಿಡಗಳು ಬೇಕು. ಪ್ರತಿಯೊಂದೂ ಎಷ್ಟೆಷ್ಟು ಇರಬಹುದು?

| ಗಿಡಗಳು | ನಾನು ಕಂಡುಕೊಂಡದ್ದು | ಗುಂಪಿನಲ್ಲಿರುವವರು ಕಂಡುಕೊಂಡದ್ದು | | |
|---|---|---|---|---|
| ನೆಲ್ಲಿಕಾಯಿ | | | | |
| ಹುಣಸೆ | | | | |
| ಮಾವು | | | | |
| ಹಲಸು | | | | |
| ಮಹಾಗನಿ | | | | |
| ಬೇವು | | | | |
| ಪೇರಳೆ | | | | |
| ನುಗ್ಗೆ | | | | |
| ಚಿಕ್ಕು | | | | |
| ಬಾದಾಮಿ | | | | |

## ಪುಸ್ತಕ ನಂಬರು

ಶಾಲಾ ಗ್ರಂಥಾಲಯಕ್ಕೆ ಮಕ್ಕಳು ಪುಸ್ತಕಗಳನ್ನು ಸಂಗ್ರಹಿಸಿದರು. ಒಂದನೇ ದಿನ ಸಂಗ್ರಹಿಸಿದ ಪುಸ್ತಕಗಳನ್ನು ಕೆಳಗೆ ಕೊಡಲಾಗಿದೆ. ಅವುಗಳಿಗೆ ಕ್ರಮವಾಗಿ ನಂಬರುಗಳನ್ನು ಕೊಡಬಹುದೇ?




ಎರಡನೇ ದಿನ ಅವರು 34 ಪುಸ್ತಕಗಳನ್ನು ಸಂಗ್ರಹಿಸಿದರು. ಹಾಗಾದರೆ ಕೊನೆಯ ಪುಸ್ತಕದ ನಂಬರು ಎಷ್ಟು? ☐

ಐದನೇ ದಿನ ಸಂಗ್ರಹಿಸಿದ ಪುಸ್ತಕಗಳಿಗೆ 253 ರಿಂದ 256 ರ ವರೆಗಿನ ನಂಬ್ರವನ್ನು ಕೊಡಲಾಯಿತು. ಹಾಗಾದರೆ ಐದನೇ ದಿನ ಲಭಿಸಿದ ಪುಸ್ತಕಗಳ ಸಂಖ್ಯೆಯೆಷ್ಟು?

## ಸಂಖ್ಯೆಗಳೆಷ್ಟು?

421 ರಿಂದ 430 ರ ವರೆಗೆ ಎಷ್ಟು ಸಂಖ್ಯೆಗಳು? ☐

567 ರಿಂದ 573 ರ ವರೆಗೆ ಎಷ್ಟು ಸಂಖ್ಯೆಗಳು? ☐

890 ರಿಂದ 898 ರ ವರೆಗೆ ಎಷ್ಟು ಸಂಖ್ಯೆಗಳು? ☐


..........................................................................................

..........................................................................................

ಒಂದು ಸಂಖ್ಯೆಯಿಂದ ಮತ್ತೊಂದು ಸಂಖ್ಯೆಯ ವರೆಗಿರುವ ಸಂಖ್ಯೆಗಳ ಸಂಖ್ಯೆಯನ್ನು ಲೆಕ್ಕಹಾಕಲು ನಾನು ಕಂಡುಕೊಂಡ ರೀತಿ.

## ಗಣಿತ ಶಿಬಿರ

ಶಾಲೆಯಲ್ಲಿ ಗಣಿತ ಶಿಬಿರವನ್ನು ನಡೆಸಲು ಉದ್ದೇಶಿಸಲಾಗಿದೆ. ಅದಕ್ಕಾಗಿ ಗಣಿತ ಪ್ರಯೋಗಾಲಯವನ್ನು ಸಂಖ್ಯಾಮಾಲೆಯಿಂದ ಅಲಂಕರಿಸಬೇಕು. ಸಂಖ್ಯಾಮಾಲೆಯನ್ನು ಪೂರ್ಣಗೊಳಿಸಿರಿ.





ಶಿಬಿರದ ಮಕ್ಕಳಿಗೆ ಕ್ರಮವಾಗಿ ಬ್ಯಾಡ್ಜ್ ನೀಡಲಾಯಿತು. ಆದಿರಾಳ ನಂಬರು 148 ಆಗಿತ್ತು. ಆದಿರಾಳಿಗಿಂತ ಮೊದಲು ಸಲೀಮನಿಗೂ ಆದಿರಾಳ ನಂತರ ಆನಿಗೂ ಬ್ಯಾಡ್ಜ್ ಸಿಕ್ಕಿತು. ಅವರ ನಂಬ್ರ ಎಷ್ಟು?

ಸಲೀಂ ☐ ಆನಿ ☐

ಆನಿಯ ಬಳಿಕ ಮೊದಲು ನೀಡಿದ ಬ್ಯಾಡ್ಜಿನ ನಂಬ್ರ ಎಷ್ಟು? ☐

ಆದಿರಾಳ ನಂತರ 20 ಜನರಿಗೆ ಬ್ಯಾಡ್ಜ್ ನೀಡಲಾಯಿತು. ಹಾಗಾದರೆ ಕೊನೆಗೆ ನೀಡಿದ ಬ್ಯಾಡ್ಜ್‌ನ ನಂಬ್ರ ಎಷ್ಟು? ☐




## ಕೋಣೆಗಳಲ್ಲಿ ಸಂಖ್ಯೆಗಳನ್ನು ಬರೆಯೋಣ


| | | |
|---|---|---|
| 828 | 829 | 830 |
| | 268 | |
| 318 | 319 | |
| 189 | | 191 |
| 758 | | |
| | 673 | |
| | | 410 |

ಖಾಲಿ ಕೋಣೆಗಳಲ್ಲಿನ ಸಂಖ್ಯೆಗಳನ್ನು ಕಂಡುಹಿಡಿದದ್ದು ಹೇಗೆ?

## ದೇಣಿಗೆ

ವಾರ್ಷಿಕೋತ್ಸವಕ್ಕೆ ಕಳೆದ ವಾರ ದೇಣಿಗೆಯಾಗಿ ಲಭಿಸಿದ ಮೊತ್ತವನ್ನು ಪಟ್ಟಿಯಲ್ಲಿ ಕೊಡಲಾಗಿದೆ. ಬಿಟ್ಟು ಹೋದ ಕೋಣೆಗಳನ್ನು ಪೂರ್ಣಗೊಳಿಸಿರಿ.

| ಕ್ರಮ ಸಂಖ್ಯೆ | ದಿವಸ | ಲಭಿಸಿದ ಮೊತ್ತ | |
|---|---|---|---|
| | | ಅಂಕೆಗಳಲ್ಲಿ | ಅಕ್ಷರಗಳಲ್ಲಿ |
| 1 | ಆದಿತ್ಯವಾರ | 775 | ಏಳುನೂರ ಎಪ್ಪತ್ತೈದು |
| 2 | ಸೋಮವಾರ | 501 | |
| 3 | ಮಂಗಳವಾರ | 450 | |
| 4 | ಬುಧವಾರ | | ಎಂಟುನೂರ ತೊಂಬತ್ತೊಂಬತ್ತು |
| 5 | ಗುರುವಾರ | 900 | ಒಂಬೈನೂರು |
| 6 | ಶುಕ್ರವಾರ | | ಮುನ್ನೂರ ಹದಿನೇಳು |
| 7 | ಶನಿವಾರ | 925 | |



## ನೋಟುಗಳು ಮತ್ತು ನಾಣ್ಯಗಳು

ಆದಿತ್ಯವಾರ ಲಭಿಸಿದ ಹಣದಲ್ಲಿ ಯಾವ ಯಾವ ನೋಟುಗಳು ಮತ್ತು ನಾಣ್ಯಗಳು ಇರಬಹುದು?

775 ರೂಪಾಯಿ

7 ನೂರು ರೂಪಾಯಿ
7 ಹತ್ತು ರೂಪಾಯಿ
5 ಒಂದು ರೂಪಾಯಿ

1 ಐನೂರು ರೂಪಾಯಿ
2 ನೂರುರೂಪಾಯಿ
1 ಐವತ್ತು ರೂಪಾಯಿ
5 ಐದು ರೂಪಾಯಿ

4 ನೂರು ರೂಪಾಯಿ
6 ಐವತ್ತು ರೂಪಾಯಿ
3 ಇಪ್ಪತ್ತು ರೂಪಾಯಿ
1 ಹತ್ತು ರೂಪಾಯಿ
2 ಎರಡು ರೂಪಾಯಿ
1 ಒಂದು ರೂಪಾಯಿ

ಇನ್ನು ಸೋಮವಾರ, ಮಂಗಳವಾರ ದಿವಸಗಳಲ್ಲಿ ಸಿಕ್ಕಿದ ಹಣವನ್ನು ವಿವಿಧ ನಾಣ್ಯ ಮತ್ತು ನೋಟುಗಳ ಗುಂಪುಗಳಾಗಿ ಬರೆಯಿರಿ.

## ಪಟ್ಟಿಯಲ್ಲಿ ಬರೆಯೋಣ







| ಮೊತ್ತ | ನೋಟುಗಳ / ನಾಣ್ಯಗಳ ಸಂಖ್ಯೆ | | | | | | | | ಒಟ್ಟು ಮೊತ್ತ |
|---|---|---|---|---|---|---|---|---|---|
| | 500 | 100 | 50 | 20 | 10 | 5 | 2 | 1 | |
| 899 | 1 | 3 | 1 | 1 | 1 | 2 | 4 | 1 | 500 + 300 + 50 + 20 + 10 + 10 + 8 + 1 |
| | | | | | | | | | |
| | | | | | | | | | |
| | | | | | | | | | |

ಗುರುವಾರ, ಶುಕ್ರವಾರ, ಶನಿವಾರಗಳ ಮೊತ್ತವನ್ನು ಮೇಲಿನ ಪಟ್ಟಿಯಲ್ಲಿ ಬರೆಯುವಿರಾ?

## ಕೋಣೆಗಳನ್ನು ಪೂರ್ತಿ ಮಾಡೋಣ

| | |
|---|---|
| 5 ನೂರುಗಳು 2 ಹತ್ತುಗಳು 4 ಒಂದುಗಳು | 524 |
| | 632 |
| 700 + 90 + 8 | |
| 9 ನೂರುಗಳು 5 ಒಂದುಗಳು | |
| | 859 |
| | 470 |

## ಅಬಾಕಸಿನಲ್ಲಿ ಕ್ರಮೀಕರಿಸೋಣ

| | |
|---|---|
|  | 214 |
|  | 132 |
|  | |
|  | 520 |
|  | |
|  | 600 |

## ದೊಡ್ಡವರಾರು? ಚಿಕ್ಕವರಾರು?

375 246 742 596 357 593

ಮೇಲೆ ನೀಡಲಾದ ಸಂಖ್ಯೆಗಳಲ್ಲಿ ಅತ್ಯಂತ ಚಿಕ್ಕ ಸಂಖ್ಯೆ ಯಾವುದು?

ಅತ್ಯಂತ ದೊಡ್ಡ ಸಂಖ್ಯೆಯೋ?

ಇವುಗಳನ್ನು ದೊಡ್ಡದರಿಂದ, ಚಿಕ್ಕದರ ವರೆಗೆ ಕ್ರಮವಾಗಿ ಬರೆಯಬಹುದೇ?

ಕಂಡುಹಿಡಿದ ರೀತಿಯನ್ನು ವಿವರಿಸಬಹುದೇ?

**ಕಡಿಮೆಯೆಷ್ಟು?**

6 ನೂರುಗಳು ಹಾಗೂ 4 ಹತ್ತುಗಳು ಸೇರಿದ ಸಂಖ್ಯೆಯನ್ನು ಬರೆಯಲು ಟೀಚರ್ ಹೇಳಿದರು. ಸುನಂದ ಬರೆದದ್ದು 4 ನೂರುಗಳು ಮತ್ತು 6 ಹತ್ತುಗಳು ಸೇರಿದ ಸಂಖ್ಯೆಯಾಗಿತ್ತು. ಸರಿಯಾದ ಸಂಖ್ಯೆಗೂ ಸುನಂದ ಬರೆದ ಸಂಖ್ಯೆಗೂ ನಡುವೆ ಇರುವ ವ್ಯತ್ಯಾಸ ಎಷ್ಟು?

## ವರ್ಗೀಕರಿಸೋಣ ಕ್ರಮೀಕರಿಸೋಣ

ಒಂದು ದಿನ ಸಂಗ್ರಹಿಸಿದ ಪುಸ್ತಕಗಳನ್ನು ಮಕ್ಕಳು ವರ್ಗೀಕರಿಸಿದರು.
ಪ್ರತಿಯೊಂದು ವಿಭಾಗದ ಪುಸ್ತಕಗಳಿಗೆ ನೀಡಿದ ನಂಬ್ರವನ್ನು ನೋಡಿರಿ. ಅವುಗಳನ್ನು ಕ್ರಮವಾಗಿ ಜೋಡಿಸಬಹುದೇ?



**ಪ್ರವಾಸ ಕಥನ ಪುಸ್ತಕಗಳು :**
324, 432, 234, 329, 502, 243

**ಗಣಿತ ಪುಸ್ತಕಗಳು :**
372, 405, 198, 350, 218, 281, 179

**ವಿಜ್ಞಾನ ಪುಸ್ತಕಗಳು :**
340, 202, 153, 418, 147, 390, 284, 189

## ಸಣ್ಣದೋ ದೊಡ್ಡದೋ?




ಈ ಅಂಕೆಗಳಿಂದ ಮೂರಂಕೆ ಸಂಖ್ಯೆಗಳನ್ನು ರಚಿಸೋಣ.
ಒಂದು ಸಂಖ್ಯೆಯನ್ನು ರಚಿಸಲು ಒಂದು ಅಂಕೆಯನ್ನು ಒಂದು ಸಲ ಮಾತ್ರವೇ ಉಪಯೋಗಿಸಬಹುದು.

ಇವುಗಳಲ್ಲಿ ಚಿಕ್ಕ ಸಂಖ್ಯೆ ಯಾವುದು?


ದೊಡ್ಡ ಸಂಖ್ಯೆಯೋ?

ಚಿಕ್ಕದರಿಂದ ದೊಡ್ಡದರ ಕಡೆಗೆ ಕ್ರಮವಾಗಿ ಬರೆಯುವಿರಾ?
ಚಿಕ್ಕದರ ಮತ್ತು ದೊಡ್ಡದರ 100ರ ಸ್ಥಾನದ ಅಂಕೆಗಳನ್ನು ನೋಡಿರಿ.

ಇಲ್ಲಿರುವ ವಿಶೇಷತೆಯೇನು?
ಒಂದರ ಸ್ಥಾನದ ಅಂಕೆಗೋ?




ಇನ್ನು 4, 5, 0 ಎಂಬೀ ಮೂರು ಅಂಕೆಗಳನ್ನು ಬಳಸಿ ಸಾಧ್ಯವಿರುವಷ್ಟು ಮೂರಂಕೆ ಸಂಖ್ಯೆಗಳನ್ನು ಬರೆಯಿರಿ. ಅವುಗಳನ್ನು ದೊಡ್ಡದರಿಂದ ಚಿಕ್ಕದರ ಕಡೆಗೆ ಕ್ರಮವಾಗಿ ಬರೆಯಿರಿ.





**ನೋಟಿನ ಸಂಖ್ಯೆ**

ಸುನೀರನ ಕೈಯಲ್ಲಿ 754 ರೂಪಾಯಿಗಳಿವೆ. ನೋಟುಗಳ ಸಂಖ್ಯೆಯೂ ಈ ಅಂಕೆಗಳ ಮೊತ್ತವೂ ಸಮಾನವಾಗಿದೆ. ಯಾವೆಲ್ಲಾ ನೋಟುಗಳು ಆಗಬಹುದು?

## ಚೋಕ್‌ಗಳನ್ನು ಎಣಿಸೋಣ

ಮಕ್ಕಳು ತಯಾರಿಸಿದ ಚೋಕ್‌ಗಳನ್ನು ಎಣಿಸಿ ನೋಡಿದರು.




ಎಲ್ಲವೂ 357 ಆಗಿದೆ.

ಚಿತ್ರವನ್ನು ನೋಡಿರಿ.

3 ನೂರುಗಳು
57 ಒಂದುಗಳು


35 ಹತ್ತುಗಳು
7 ಒಂದುಗಳು

357

3 ನೂರುಗಳು
5 ಹತ್ತುಗಳು
7 ಒಂದುಗಳು

357 ಒಂದುಗಳು

ಇದರಂತೆ ಈ ಸಂಖ್ಯೆಗಳನ್ನು ಬರೆದರೋ.




**ದೊಡ್ಡ ಸಂಖ್ಯೆ**

| ಆಡುವವರ ಹೆಸರು | ಸಂಖ್ಯೆ | | |
|---|---|---|---|
| | | | |
| | | | |
| | | | |
| | | | |
| | | | |

5 ಮಕ್ಕಳಿಗೆ ಆಡಬಹುದು. ಆಡುವವರ ಹೆಸರನ್ನು ಮೊದಲು ಕೋಣೆಯಲ್ಲಿ ಬರೆಯುವರು. ಮೊದಲನೆಯವ ದಾಳ ಎಸೆಯುವನು. ಸಿಕ್ಕಿದ ಅಂಕೆಯನ್ನು ಇಷ್ಟವಿರುವ ಕೋಣೆಯಲ್ಲಿ ಬರೆಯುವನು. ಎಲ್ಲರೂ ದಾಳ ಎಸೆದು ಆಟ ಮುಂದುವರಿಸುವರು. ಕೋಣೆಗಳೆಲ್ಲಾ ತುಂಬಿದರೆ ಅತ್ಯಂತ ದೊಡ್ಡ ಮೂರಂಕೆ ಸಂಖ್ಯೆ ಲಭಿಸಿದವನು ಗೆಲ್ಲುವನು. ಇನ್ನು ನೀವು ಆಡಿ ನೋಡಿ.

**ನಮೂನೆಗಳನ್ನು ಪೂರ್ತಿಗೊಳಿಸಬಹುದೇ?**

- 330, 340, 350, ................ , ................, , ................
- 575, 600, 625, ................ , ................ , ................
- 950, 900, 850, ................ , ................ , ................
- 412, 512, 612, ................ , ................ , ................
- 203, 313, 423, ................ , ................ , ................

**ಚೀಲದ ಬೆಲೆ**

ಆದಿರಾಳಿಗೆ ತಂದೆ ಒಂದು ಚೀಲವನ್ನು ಖರೀದಿಸಿದರು. ನೂರು ರೂಪಾಯಿಯ 2 ನೋಟುಗಳನ್ನು, ಹತ್ತು ರೂಪಾಯಿಯ 17 ನೋಟುಗಳನ್ನು, ಒಂದು ರೂಪಾಯಿಯ 13 ನಾಣ್ಯಗಳನ್ನು ಅಂಗಡಿಯವನಿಗೆ ನೀಡಿದರು. ಹಾಗಾದರೆ ಚೀಲದ ಬೆಲೆ ಎಷ್ಟು?

**ನೋಟು ಯಾವುದು?**

ಆದಿರಾ ಮತ್ತು ಗೆಳತಿ ರಮ್ಲಾ ಒಂದೊಂದು ನೋಟುಗಳೊಂದಿಗೆ ಅಂಗಡಿಗೆ ಹೋದರು. ಆದಿರಾ ಆ ನೋಟನ್ನು ಚಿಲ್ಲರೆ ಮಾಡಿದಳು. ಅವಳಿಗೆ ನೂರು ರೂಪಾಯಿಯ 2 ನೋಟುಗಳು, ಐವತ್ತು ರೂಪಾಯಿಯ 3 ನೋಟುಗಳು, ಹತ್ತು ರೂಪಾಯಿಯ 5 ನೋಟುಗಳು ಮತ್ತು ಐದು ರೂಪಾಯಿಯ 20 ನೋಟುಗಳು ಲಭಿಸಿದವು.

ರಮ್ಲಾ 50 ರೂಪಾಯಿಗೆ ಸಾಮಗ್ರಿಗಳನ್ನು ಖರೀದಿಸಿದಳು. ಅವಳಿಗೆ ನೂರು ರೂಪಾಯಿಯ 2 ನೋಟುಗಳು, ಐವತ್ತು ರೂಪಾಯಿಯ 4 ನೋಟುಗಳು ಮತ್ತು ಹತ್ತು ರೂಪಾಯಿಯ 5 ನೋಟುಗಳು ಬಾಕಿ ಸಿಕ್ಕಿತು. ಅವರು ಕೊಂಡುಹೋದ ನೋಟು ಯಾವುದು?

ನೋಟುಗಳನ್ನು ಮತ್ತು ನಾಣ್ಯಗಳನ್ನು ಯಾವ ಯಾವ ರೀತಿಯಲ್ಲಿ ಸೇರಿಸಿ 500 ರೂಪಾಯಿ ಮಾಡಬಹುದು?

**ನಾನು ಕಂಡುಕೊಂಡದ್ದು**





**ಸಹಪಾಠಿಗಳು ಕಂಡುಕೊಂಡದ್ದು**



**50 ರೂಪಾಯಿ ನೋಟು**


ರಾಜು ನೂರು ರೂಪಾಯಿಯ 8 ನೋಟುಗಳನ್ನು ಕೊಟ್ಟು ಎಲ್ಲವನ್ನೂ 50 ರೂಪಾಯಿ ನೋಟುಗಳನ್ನಾಗಿ ಮಾಡಿದನು. 50 ರೂಪಾಯಿ ನೋಟುಗಳು ಎಷ್ಟು ಇರಬಹುದು? ಎಲ್ಲವೂ 20 ರೂಪಾಯಿ ನೋಟುಗಳಾದರೆ, ಎಷ್ಟು ನೋಟುಗಳು ಇರಬಹುದು?

## ನಂಬರು ನೀಡುವ




ಕ್ರೀಡಾ ಕೂಟದಲ್ಲಿ ಭಾಗವಹಿಸುವ ಮಕ್ಕಳಿಗೆ ನಂಬರುಗಳನ್ನು ಕೊಡಲಾಗಿದೆ. ಎಲ್.ಪಿ. ವಿಭಾಗದ ಮಕ್ಕಳಿಗೆ 201ರಿಂದ 265ರ ವರೆಗೂ, ಯು.ಪಿ. ವಿಭಾಗಕ್ಕೆ 266ರಿಂದ 340ರ ವರೆಗೂ ನಂಬರುಗಳನ್ನು ನೀಡಲಾಯಿತು. ಹಾಗಾದರೆ ಯಾವ ವಿಭಾಗದಿಂದ ಹೆಚ್ಚು ಮಕ್ಕಳು ಭಾಗವಹಿಸುವುದು?

## ಮೊತ್ತ 12 ಮಾಡಬಹುದೇ?



1 ರಿಂದ 7 ರ ವರೆಗಿನ ಅಂಕೆಗಳನ್ನು ಆವರ್ತಿಸದೆ ಉರುಟಾದ ಕೋಣೆಯೊಳಗೆ ಬರೆಯಬೇಕು. ಒಂದು ಸಾಲಿನ ಮೂರು ಉರುಟಾದ ಕೋಣೆಗಳೊಳಗಿನ ಅಂಕೆಗಳ ಮೊತ್ತ 12 ಆಗಬೇಕು. ಬರೆದು ನೋಡಿ.

### ಕೋಣೆಗಳನ್ನು ತುಂಬಿಸುವ

| | | |
|---|---|---|
| 100 | 200 | 300 |
| 300 | 100 | 200 |
| 200 | 300 | 100 |

| | | |
|---|---|---|
| | | |
| | 400 | |
| | | |

| | | |
|---|---|---|
| | | |
| | | |
| | | |

- ಒಂದನೇ ಆಯತದ ಕೋಣೆಗಳನ್ನು ಪೂರ್ತಿಗೊಳಿಸಿದ್ದನ್ನು ನೋಡಿರಿ. ಪ್ರತಿಯೊಂದು ಸಾಲಿನಲ್ಲಿ ಯಾವ ಯಾವ ಸಂಖ್ಯೆಗಳಿವೆ?
- ಇದೇ ರೀತಿಯಲ್ಲಿ 400, 500, 600 ಎಂಬೀ ಸಂಖ್ಯೆಗಳಿಂದ ಎರಡನೇ ಆಯತದ ಕೋಣೆಗಳನ್ನು ಪೂರ್ತಿ ಮಾಡಿರಿ. 700, 800, 900 ಎಂಬಿವುಗಳಿಂದ ಮೂರನೇ ಆಯತದ ಕೋಣೆಗಳನ್ನು ಪೂರ್ತಿಗೊಳಿಸಿರಿ.
- ಆಯತಗಳನ್ನು ಸೇರಿಸಿಟ್ಟರೆ ಒಂದನೇ ಸಾಲಿನ ಸಂಖ್ಯೆಗಳು ಯಾವುವು?
- ಎರಡನೇ ಮತ್ತು ಮೂರನೇ ಸಾಲಿನಲ್ಲಿರುವುದು ಇವೇ ಸಂಖ್ಯೆಗಳಾಗಿವೆಯೇ?

### ಬಲಭಾಗಕ್ಕೂ ಕೆಳಭಾಗಕ್ಕೂ

| | | | | | |
|---|---|---|---|---|---|
| 90 | 140 | 190 | ........ | ........ | ........ |
| 100 | 150 | 200 | ........ | ........ | ........ |
| 110 | 160 | 210 | ........ | ........ | ........ |
| 300 | 450 | 600 | | | |

- ಆಯತದೊಳಗಿನ ಸಂಖ್ಯೆಗಳಿಗೆ ಒಂದು ಕ್ರಮವಿದೆ. ಅದಕ್ಕನುಗುಣವಾಗಿ ಉಳಿದ ಸಂಖ್ಯೆಗಳನ್ನು ಬರೆಯಿರಿ.

### ಕೂಡಿಸಿ ನೋಡುವ

```
  1 2 3 4 5 6 7 8 9 +
  9 8 7 6 5 4 3 2 1
                  1
---------------------
1 1 1 1 1 1 1 1 1 1
---------------------
```


```
  1 2 3 4 5 6 7 8 9 +
  9 8 7 6 5 4 3 2 1
  1 2 3 4 5 6 7 8 9
  9 8 7 6 5 4 3 2 1
                  2
---------------------
2 2 2 2 2 2 2 2 2 2
---------------------
```


- ಮುಂದಿನದ್ದೋ?

# 2

# ಒಟ್ಟು ಸೇರಿಸುವ

## ಯಾರೆಲ್ಲಾ ಸೇರಿದರೆ?




- ಉಣ್ಣಿ ಮತ್ತು ಟೋಮಿ ಸಂಖ್ಯಾಕಾರ್ಡುಗಳ ಆಟವಾಡುತ್ತಿದ್ದಾರೆ.
- ಎರಡು ಕಾರ್ಡುಗಳಲ್ಲಿರುವ ಸಂಖ್ಯೆಗಳನ್ನು ಕೂಡಿಸಿದರೆ 70 ಸಿಗಬೇಕು.
- ಅತಿ ಹೆಚ್ಚು ಜೋಡಿಗಳನ್ನು ಮಾಡುವವರು ವಿಜೇತರಾಗುವರು.
- ಎರಡು ಕಾರ್ಡುಗಳಲ್ಲಿರುವ ಸಂಖ್ಯೆಗಳನ್ನು ಕೂಡಿಸಿ ನೀವೂ 70 ಮಾಡಿ ನೋಡಿರಿ.
- ಹೀಗೆ ಎಷ್ಟು ಜೋಡಿಗಳು ಸಿಗಬಹುದು?

| ನಾವು ಕಂಡುಕೊಂಡದ್ದು | |
|---|---|
| • | • |
| • | • |
| • | • |

## ನನ್ನ ಆಲೋಚನೆ

ಟೋಮಿ ಮತ್ತು ತಾಯಿ ಅಂಗಡಿಗೆ ತಲುಪಿದರು. 100 ರೂಪಾಯಿಯ ಸಾಮಗ್ರಿಗಳನ್ನು ಖರೀದಿಸಿದರು. ಕೊಡಬೇಕಾದ ಮೊತ್ತವನ್ನು ಕಂಡುಹಿಡಿಯಲು ಟೋಮಿ ಯಾವ ಯಾವ ರೀತಿಗಳಿಂದ ಆಲೋಚಿಸಿರಬಹುದು?




$56 + 44 = 56 + 40 + 4 = 100$

$56 + 44 = 50 + 6 + 40 + 4 = 100$

............... = ........................... = ..........

............... = ........................... = ..........



- ಅಮ್ಮ ಅಂಗಡಿಯಿಂದ 2 ಕಿಲೋ ಗ್ರಾಂ ಸಕ್ಕರೆ ಹಾಗೂ 2 ಕಿಲೋ ಗ್ರಾಂ ಬೇಳೆಯನ್ನು ಖರೀದಿಸಿದಳು. ಸಕ್ಕರೆಗೆ ಕಿಲೋಗ್ರಾಂಗೆ 35 ರೂಪಾಯಿ, ಬೇಳೆಗೆ ಕಿಲೋ ಗ್ರಾಂಗೆ 68 ರೂಪಾಯಿ ಬೆಲೆ. ಅಮ್ಮ ಅಂಗಡಿಯಲ್ಲಿ ಎಷ್ಟು ರೂಪಾಯಿ ಕೊಡಬೇಕು?

## ಅಡ್ಡಸಾಲು ನೀಟಸಾಲು

| | | |
|---|---|---|
| 128 | 121 | 126 |
| 123 | 125 | 127 |
| 124 | 129 | 122 |

ಕೋಣೆಯೊಳಗಿನ ಅಂಕೆಗಳನ್ನು ಅಡ್ಡಕ್ಕೂ, ನೀಟಕ್ಕೂ ಮೂಲೆಯಿಂದ ಮೂಲೆಗೂ ಕೂಡಿಸಿ ನೋಡಿ. ಏನಾದರೂ ವಿಶೇಷತೆ ಇದೆಯೇ? ಕ್ರಮಾನುಗತವಾದ 9 ಅಂಕೆಗಳನ್ನು ಉಪಯೋಗಿಸಿ ಇನ್ನೊಂದನ್ನು ಮಾಡಿ ನೋಡಿರಿ.

ಮಾಯಾ ಚೌಕ ಲಭಿಸುತ್ತದೆಯೋ?

## ಬಿಲ್ ನೋಡುವ

ಟೋಮಿ ಮತ್ತು ಅವನ ಅಕ್ಕ ಮೇರಿ ಅಂಗಡಿಯಿಂದ ಸಾಮಗ್ರಿಗಳನ್ನು ಖರೀದಿಸಿದರು.





ನಂಬ್ರ 228 **ದಿನಸಿ ಅಂಗಡಿ**

| ವಸ್ತುಗಳು | ತೂಕ | ಬೆಲೆ |
|---|---|---|
| ಅಕ್ಕಿ | 5 ಕಿ.ಗ್ರಾಂ. | 150 |
| ಸಕ್ಕರೆ | 2 ಕಿ.ಗ್ರಾಂ. | 56 |
| ಸಾಬೂನು | 2 | 20 |
| | ಒಟ್ಟು | ........ |

ನಂಬ್ರ 136 **ತರಕಾರಿ ಅಂಗಡಿ**

| ವಸ್ತುಗಳು | ತೂಕ | ಬೆಲೆ |
|---|---|---|
| ನೀರುಳ್ಳಿ | 1 ಕಿ.ಗ್ರಾಂ. | 25 |
| ಬೆಂಡೆಕಾಯಿ | 1 ಕಿ.ಗ್ರಾಂ. | 25 |
| ಕ್ಯಾರೆಟ್ | 1 ಕಿ.ಗ್ರಾಂ. | 36 |
| ಬಾಳೆಹಣ್ಣು | 1 ಕಿ.ಗ್ರಾಂ. | 50 |
| | ಒಟ್ಟು | ........ |

■ ಪ್ರತಿಯೊಂದು ಬಿಲ್ಲಿನ ಮೊತ್ತ ಎಷ್ಟು? ಒಟ್ಟು ಎಷ್ಟು ಹಣ ಕೊಡಬೇಕು?

| | | | |
|---|---|---|---|
| |  |  |  |
| ದಿನಸಿ ಅಂಗಡಿಯ ಬಿಲ್ | 2 | 2 | 6 |
| |  |  |  |
| ತರಕಾರಿಯ ಬಿಲ್ | | | |
| |  |  |  |
| ಒಟ್ಟು | 3 ನೂರುಗಳು | 5 ಹತ್ತುಗಳು | 12 ಒಂದುಗಳು |

12 ಒಂದು ರೂಪಾಯಿಗಳನ್ನು, 1 ಹತ್ತು ರೂಪಾಯಿ ಮತ್ತು 2 ರೂಪಾಯಿ ಆಗಿ ಮಾಡಿ, 1 ಹತ್ತು ರೂಪಾಯಿಯನ್ನು 5 ಹತ್ತು ರೂಪಾಯಿಗಳೊಂದಿಗೆ ಸೇರಿಸಬಹುದಲ್ಲವೇ?

| | | |
|---|---|---|
| 3 ನೂರುಗಳು | 5 ಹತ್ತುಗಳು | (1) 2 ಒಂದುಗಳು → 1 |
| 3 ನೂರುಗಳು | 6 ಹತ್ತುಗಳು | 2 ಒಂದುಗಳು |


ಇದನ್ನು ಹೀಗೆ ಬರೆಯಬಹುದು

| ನೂರುಗಳು | ಹತ್ತುಗಳು | ಒಂದುಗಳು | |
|---|---|---|---|
| 2 | (1) 2 | 6 | + |
| 1 | 3 | 6 | |
| 3 | 6 | (1) 2 | |

$$\begin{array}{r} {}^{1} \\ 226 \; + \\ 136 \\ \hline 362 \\ \hline \end{array}$$


## ಹುಟ್ಟು ಹಬ್ಬದ ಉಡುಗೊರೆ

ತಂದೆಯ ಹುಟ್ಟುಹಬ್ಬಕ್ಕೆ ಉಡುಗೊರೆಯನ್ನು ಕೊಡಬೇಕು. ಮೇರಿ ಮತ್ತು ಟೋಮಿ ಉಳಿತಾಯ ಪೆಟ್ಟಿಗೆಯನ್ನು ತೆರೆದರು.



ಉಳಿತಾಯ ಪೆಟ್ಟಿಗೆಯಲ್ಲಿ ಒಟ್ಟು ಎಷ್ಟು ರೂಪಾಯಿಗಳಿವೆ?

12 ಹತ್ತುಗಳೆಂದರೆ 10 ಹತ್ತುಗಳು ಮತ್ತು 2 ಹತ್ತುಗಳು ಎಂದಲ್ಲವೇ.



| | | | |
|---|---|---|---|
| 3 ನೂರುಗಳು | 5 ಹತ್ತುಗಳು | 4 ಒಂದುಗಳು | + |
| 1 ನೂರುಗಳು | 7 ಹತ್ತುಗಳು | 2 ಒಂದುಗಳು | |
| (1) 4 ನೂರುಗಳು | (1) 2 ಹತ್ತುಗಳು | 6 ಒಂದುಗಳು | |

ಇದನ್ನು ಹೀಗೆ ಬರೆಯುವ

| ನೂರುಗಳು | ಹತ್ತುಗಳು | ಒಂದುಗಳು | |
|---|---|---|---|
| (1) 3 | 5 | 4 | + |
| 1 | 7 | 2 | |
| 5 | (1) 2 | 6 | |

$$\begin{array}{r} {}^{1}\\ 354 \; + \\ 172 \\ \hline 526 \\ \hline \end{array}$$

## ಗ್ರಂಥಾಲಯ

ಮೇರಿಯ ಶಾಲೆಯ ಗ್ರಂಥಾಲಯದಲ್ಲಿ 524 ಕನ್ನಡ ಪುಸ್ತಕಗಳು ಮತ್ತು 75 ಇಂಗ್ಲೀಷ್ ಪುಸ್ತಕಗಳು ಇವೆ.





■ ಹೊಸ ಪುಸ್ತಕಗಳನ್ನು ಸೇರಿಸಿದಾಗ ಗ್ರಂಥಾಲಯದಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆ ಎಷ್ಟು? ಇಂಗ್ಲೀಷ್ ಪುಸ್ತಕಗಳು ಎಷ್ಟು? ಕನ್ನಡವೋ?

## ಕ್ರೀಡಾ ಕೂಟ


ಮೇರಿಯ ಶಾಲೆಯಲ್ಲಿ ನಡೆದ ಉಪಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಒಂದನೇ ದಿನ 199 ಹುಡುಗರು ಮತ್ತು 204 ಹುಡುಗಿಯರು ಭಾಗವಹಿಸಿದರು. ಎರಡನೇ ದಿನ ಇವರೊಂದಿಗೆ ಇನ್ನೂ 31 ಹುಡುಗರು ಹಾಗೂ 21 ಹುಡುಗಿಯರು ಸೇರಿಕೊಂಡರು.

- ಕ್ರೀಡಾ ಕೂಟದಲ್ಲಿ ಭಾಗವಹಿಸಿದವರು ಎಷ್ಟು ಮಂದಿ?
- ಹೆಚ್ಚು ಇರುವುದು ಹುಡುಗರೋ, ಹುಡುಗಿಯರೋ?
- 951 ರಿಂದ 989 ರ ವರೆಗಿರುವ ಸಂಖ್ಯೆಗಳನ್ನು ಓಟ ಸ್ಪರ್ಧೆಯಲ್ಲಿ ಭಾಗವಹಿಸಿದವರಿಗೆ ನೀಡಿರುವುದು. ಹಾಗಾದರೆ ಓಟ ಸ್ಪರ್ಧೆಯಲ್ಲಿ ಭಾಗವಹಿಸಿದವರು ಎಷ್ಟು ಮಂದಿ?



## ನಾನು ಕಂಡುಹಿಡಿದ ವಿಧಾನ






## ಸಂಖ್ಯೆಗಳ ಸೌಂದರ್ಯ

1 ರಿಂದ 5 ರ ವರೆಗಿರುವ ಅಂಕೆಗಳಲ್ಲಿ ಅನುಕ್ರಮವಾದ 3 ಅಂಕೆಗಳನ್ನು ಉಪಯೋಗಿಸಿ ಬರೆಯಬಹುದಾದ ಅತಿ ದೊಡ್ಡ ಸಂಖ್ಯೆಯೊಂದಿಗೆ ಅತಿ ಸಣ್ಣ ಸಂಖ್ಯೆಯನ್ನು ಕೂಡಿಸಿದಾಗ ಸಿಗುವ ಮೊತ್ತಕ್ಕೆ ಏನಾದರೂ ವಿಶೇಷತೆ ಇದೆಯೇ?

ಕಂಡುಹಿಡಿಯಿರಿ.

## ಎಷ್ಟು ಗುಂಪುಗಳು?

ಕ್ರೀಡಾಕೂಟದ ಅಂಗವಾಗಿ ಪಾಯಸ ಮಾಡಲು ಎಲ್.ಪಿ. ವಿಭಾಗದಿಂದ 269 ತೆಂಗಿನಕಾಯಿಗಳು ಸಿಕ್ಕಿದುವು. ಎಲ್.ಪಿ. ವಿಭಾಗದಿಂದ ಸಿಕ್ಕಿರುವುದಕ್ಕಿಂತ 162 ಹೆಚ್ಚು ತೆಂಗಿನಕಾಯಿಗಳು ಯು.ಪಿ. ವಿಭಾಗದಿಂದ ಸಿಕ್ಕಿದುವು.

- ಒಟ್ಟು ಎಷ್ಟು ತೆಂಗಿನಕಾಯಿಗಳು ಸಿಕ್ಕಿದುವು?
- ತೆಂಗಿನಕಾಯಿಗಳನ್ನು 100 ರ ಗುಂಪುಗಳಾಗಿ ಮಾಡಿದರೆ ಎಷ್ಟು ಗುಂಪುಗಳು ಸಿಗುವುವು?





- ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಲು ಏನು ಮಾಡಬೇಕೆಂದು ನನಗೆ ಅರ್ಥವಾಯಿತು. ☐
- ಯು.ಪಿ. ವಿಭಾಗದ ಸಂಖ್ಯೆಯನ್ನು ಕಂಡುಹಿಡಿಯದೆಯೇ ಒಟ್ಟು ಸಂಖ್ಯೆಯನ್ನು ಕಂಡುಹಿಡಿಯಲು ತಿಳಿಯಿತು. ☐
- ಮಾಡಿದ ಗಣಿತ ಕ್ರಿಯೆ ಸರಿಯೆಂದು ನನಗೆ ದೃಢವಾಗಿ ತಿಳಿದಿದೆ. ☐
- ಉತ್ತರವನ್ನು ಕಂಡುಹಿಡಿಯಲು ಉಪಯೋಗಿಸಿದ ವಿಧಾನ ಮತ್ತು ಕ್ರಿಯಾ ವಿಧಾನವನ್ನು ನನಗೆ ಹೇಳಲು ಸಾಧ್ಯವಿದೆ. ☐

## ವಿಜಯೋತ್ಸವ

ಶಾಲಾ ಕ್ರೀಡಾಕೂಟದಲ್ಲಿ ಇವರಿಗೆ ಸಿಕ್ಕಿದ ಅಂಕಗಳನ್ನು ನೋಡಿರಿ.








ಪ್ರತಿಯೊಂದು ಗುಂಪಿಗೆ ಸಿಕ್ಕಿದ ಅಂಕಗಳು ಎಷ್ಟು? ☐ ಯಾರಿಗೆ ಹೆಚ್ಚು? ☐

## ಸರ್ಕಸ್

ಸರ್ಕಸ್ ನೋಡಲು ಎಲ್ಲರಿಗೂ ಕುತೂಹಲವಾಯಿತು.




ಒಟ್ಟು ಎಷ್ಟು ಮಂದಿ ಟಿಕೇಟ್ ತೆಗೆದುಕೊಂಡರು?

## ಬಣ್ಣ ಹಚ್ಚಿರಿ

ಈ ಕೋಣೆಗಳಲ್ಲಿ ಒಬ್ಬನು ಅಡಗಿಕೊಂಡಿದ್ದಾನೆ. ಕೆಳಗೆ ಕೊಟ್ಟಿರುವ ಸಂಖ್ಯೆಗಳನ್ನು ಕೂಡಿಸಿ ನೋಡಿರಿ. ಉತ್ತರವಾಗಿ ಸಿಕ್ಕಿದ ಸಂಖ್ಯೆಗಳು ಇರುವ ಕೋಣೆಗಳಿಗೆ ಬಣ್ಣ ಹಚ್ಚಿರಿ.

345 + 543 = ........

740 + 360 = ........

580 + 406 = ........

529 + 382 = ........

567 + 765 = ........


606 + 205 = ........

340 + 286 = ........

457 + 308 = ........

409 + 235 = ........

393 + 139 = ........




## ಬಹುಮಾನ ಗೆಲ್ಲುವ...

ಬಟ್ಟೆ ಅಂಗಡಿಯ ಜಾಹೀರಾತನ್ನು ಗಮನಿಸಿದಿರಾ?

- ಸಿನಿಯು ಒಂದು ಸೀರೆಯನ್ನೂ ಒಂದು ಅಂಗಿಯನ್ನೂ ಕೊಂಡುಕೊಂಡಳು.
- ಸುನೀತಳು ಒಂದು ಚೂಡಿದಾರವನ್ನು, ಒಂದು ಸೀರೆಯನ್ನು ಮತ್ತು ಒಂದು ಬ್ಯಾಗನ್ನು ಕೊಂಡುಕೊಂಡಳು.
- ರಸಿಯಳು ಒಂದು ಬ್ಯಾಗನ್ನು, ಒಂದು ಕೊಡೆಯನ್ನು ಕೊಂಡುಕೊಂಡಳು.
- ರಶೀದನು ಒಂದು ಬನಿಯನ್, ಒಂದು ಅಂಗಿ ಮತ್ತು ಒಂದು ಕೊಡೆಯನ್ನು ಕೊಂಡುಕೊಂಡನು.
- ಲೈಲಾಳು ಒಂದು ಮಿಡಿಯನ್ನು, ಒಂದು ಟೋಪನ್ನು ಕೊಂಡುಕೊಂಡಳು.
- ಆನ್ಸಿ ಒಂದು ಚೂಡಿದಾರವನ್ನೂ ಒಂದು ಸೀರೆಯನ್ನೂ ಕೊಂಡುಕೊಂಡಳು.

ಇವರಲ್ಲಿ ಯಾರಿಗೆಲ್ಲ ಬಹುಮಾನ ಸಿಗಬಹುದು?

| | |
|---|---|
| ಬನಿಯನ್.............................. | 76 ರೂ |
| ಅಂಗಿ.................................. | 325 ರೂ |
| ಚೂಡಿದಾರ........................ | 350 ರೂ |
| ಮಿಡಿ.................................. | 265 ರೂ |
| ಟೋಪ್............................ | 215 ರೂ |
| ಕೊಡೆ ............................... | 175 ರೂ |
| ಬ್ಯಾಗ್................................ | 285 ರೂ |
| ಸೀರೆ .................................. | 375 ರೂ |

500 ರೂಪಾಯಿಗಿಂತ ಹೆಚ್ಚಿನ ಬೆಲೆಯ ವಸ್ತುಗಳನ್ನು ಖರೀದಿಸಿದವರಿಗೆ ಒಂದು ಬಹುಮಾನ.



- ಒಂದು ಬಾಳೆ ತೋಟದಲ್ಲಿ ಮೊದಲ ದಿನ 874 ಹಾಗೂ ಎರಡನೇ ದಿನ 569 ಬಾಳೆಗಿಡಗಳನ್ನು ನೆಟ್ಟರು. ಒಟ್ಟು ಬಾಳೆಗಿಡಗಳು ಎಷ್ಟು?
- ರಖಂ ವ್ಯಾಪಾರದ ಅಂಗಡಿಯಲ್ಲಿ ಮೊದಲ ದಿವಸ 666 ಗೋಣಿ ಅಕ್ಕಿ, ಎರಡನೇ ದಿವಸ 555 ಗೋಣಿ ಅಕ್ಕಿ ಮತ್ತು ಮೂರನೇ ದಿವಸ 777 ಗೋಣಿ ಅಕ್ಕಿಯನ್ನು ಮಾರಾಟ ಮಾಡಲಾಯಿತು. ಹಾಗಾದರೆ ಒಟ್ಟು ಎಷ್ಟು ಗೋಣಿ ಅಕ್ಕಿಯನ್ನು ಮಾರಾಟ ಮಾಡಲಾಗಿದೆ?
- ಪ್ರಕೃತಿ ವಿಕೋಪ ಪರಿಹಾರ ನಿಧಿಗೆ ಮೊದಲ ದಿವಸ 468 ರೂಪಾಯಿಗಳು, ಎರಡನೇ ದಿವಸ 357 ರೂಪಾಯಿಗಳು ಸಿಕ್ಕಿದುವು.

  ಎರಡೂ ದಿವಸಗಳಲ್ಲಿ ಸೇರಿ ಒಟ್ಟು ಎಷ್ಟು ರೂಪಾಯಿ ಸಿಕ್ಕಿತು?

  1000 ರೂಪಾಯಿಯಾಗಲು ಇನ್ನು ಎಷ್ಟು ರೂಪಾಯಿ ಬೇಕಾಗಬಹುದು?
- ಗಣಿತಮೇಳದ ಪ್ರದರ್ಶನ ನೋಡಲು ಮೊದಲ ದಿನ 228 ಜನರು, ಎರಡನೇ ದಿನ 272 ಜನರು ಬಂದರು. ಸಮಾರೋಪ ದಿನದಂದು ಮೊದಲ ಎರಡು ದಿನಗಳಲ್ಲಿ ಬಂದಿರುವ ಜನರ ಸಂಖ್ಯೆಯ ಎರಡು ಪಾಲಿನಷ್ಟು ಜನರು ಬಂದರು. ಹಾಗಾದರೆ ಗಣಿತ ಮೇಳವನ್ನು ವೀಕ್ಷಿಸಲು ಒಟ್ಟು ಎಷ್ಟು ಜನರು ಬಂದರು?
- 40 ರಂತೆ ಸೀಟುಗಳಿರುವ 6 ಬಸ್ಸುಗಳು ಶಾಲಾ ಪ್ರವಾಸಕ್ಕಾಗಿ ಹೊರಟವು. 6 ನೇ ಬಸ್ಸಿನಲ್ಲಿ ಅರ್ಧದಷ್ಟು ಸೀಟುಗಳು ಖಾಲಿಯಾಗಿದ್ದರೆ ಶಾಲಾ ಪ್ರವಾಸಕ್ಕೆ ಹೋದ ಮಕ್ಕಳ ಒಟ್ಟು ಸಂಖ್ಯೆ ಎಷ್ಟು?

## ಸಮವೋ ವಿಷಮವೋ

ಅನುಕ್ರಮವಾದ ಎರಡು ಸಂಖ್ಯೆಗಳ ಮೊತ್ತ

1 + 2 = ................
2 + 3 = ................
...... + ...... = ................
9 + 10 = ................
22 + 23 = ................
131 + 132 = ................
...... + ...... = ................
...... + ...... = ................

ಅನುಕ್ರಮವಾದ ಎರಡು ಸಂಖ್ಯೆಗಳ ಮೊತ್ತಗಳಿಗೆ ಇರುವ ವಿಶೇಷತೆ ಏನು? ಯಾಕಾಗಿ?

ಅನುಕ್ರಮವಾದ ಎರಡು ಸಂಖ್ಯೆಗಳ ಮೊತ್ತವು ಯಾವಾಗಲೂ ಒಂದು ವಿಷಮ ಸಂಖ್ಯೆಯಾಗಿರುವುದು.

ಎರಡು ಸಮಸಂಖ್ಯೆಗಳ ಮೊತ್ತವನ್ನು ಕಂಡುಹಿಡಿಯಿರಿ.

2 + 4 = ................
4 + 6 = ................
6 + 10 = ................
...... + ...... = ................
14 + 16 = ................
28 + 40 = ................
246 + 268 = ................
...... + ...... = ................
...... + ...... = ................

ಎರಡು ಸಮ ಸಂಖ್ಯೆಗಳ ಮೊತ್ತಕ್ಕೆ ಇರುವ ವಿಶೇಷತೆಯೇನು? ಯಾಕಾಗಿ?

- ಶಾಲಾ ಪಿ.ಟಿ.ಎ. ಸಭೆಯಲ್ಲಿ 107 ಮಂದಿ ಪುರುಷರು ಮತ್ತು 270 ಮಂದಿ ಸ್ತ್ರೀಯರು ಭಾಗವಹಿಸಿದರು. ಹಾಗಾದರೆ ಸಭೆಯಲ್ಲಿ ಭಾಗವಹಿಸಿದವರು ಎಷ್ಟು ಮಂದಿ?
- ಗ್ರಾಮ ದೇಶಂ ಕ್ಲಬ್ಬಿನವರ 'ಒಂದು ಮಗುವಿಗೆ ಒಂದು ಕೋಳಿ' ಎಂಬ ಯೋಜನೆ ಪ್ರಕಾರ ಶಾಲೆಯ ಎಲ್ಲಾ ಮಕ್ಕಳಿಗೆ ಉಚಿತವಾಗಿ ಕೋಳಿ ಮರಿಗಳನ್ನು ನೀಡಿದರು. ಮೊದಲ ದಿನ 384 ಮತ್ತು ಎರಡನೇ ದಿನ 448 ಕೋಳಿಮರಿಗಳನ್ನು ನೀಡಿದರು. ಹಾಗಾದರೆ ಶಾಲೆಯಲ್ಲಿರುವ ಮಕ್ಕಳ ಒಟ್ಟು ಸಂಖ್ಯೆ ಎಷ್ಟು?

ಎರಡು ವಿಷಮ ಸಂಖ್ಯೆಗಳ ಮೊತ್ತವನ್ನು ಕಂಡುಹಿಡಿದು ನೋಡಿರಿ.

3 + 5 = ................
5 + 7 = ................
...... + ...... = ................
13 + 17 = ................
127 + 139 = ..................
...... + ...... = ................
...... + ...... = ................

ಎರಡು ವಿಷಮ ಸಂಖ್ಯೆಗಳ ಮೊತ್ತಕ್ಕೆ ಏನು ವಿಶೇಷತೆಯಿದೆ? ಯಾಕಾಗಿ?

ಒಂದು ವಿಷಮ ಸಂಖ್ಯೆ ಮತ್ತು ಒಂದು ಸಮಸಂಖ್ಯೆಯನ್ನು ಕೂಡಿಸಿದರೋ?

## ದಾರಿ ಕಂಡುಹಿಡಿಯಬಹುದೇ?

ಚಕ್ಕಿ ಬೆಕ್ಕು ಚಿಕ್ಕಿಲಿಯನ್ನು ಹಿಡಿಯಲಿರುವ ಪ್ರಯತ್ನದಲ್ಲಿದೆ. ಸರಿಯಾದ ದಾರಿಯಲ್ಲಿ ಹೋದರೆ ಮಾತ್ರ ಇಲಿಯನ್ನು ಹಿಡಿಯಲು ಸಾಧ್ಯವಿದೆ. ದಾರಿ ಯಾವುದೆಂದು ತಿಳಿಯದೆ ಕಷ್ಟದಲ್ಲಿರುವ ಚಕ್ಕಿ ಬೆಕ್ಕಿಗೆ ಸಹಾಯ ಮಾಡಬಹುದೇ?

ದಾರಿ ಕಂಡುಹಿಡಿಯಲಿರುವ ವಿಧಾನ ಇಲ್ಲಿದೆ. ಒಂದನೇ ಕೋಣೆಯಲ್ಲಿರುವ ಸಂಖ್ಯೆಯ ಇಮ್ಮಡಿ ಸಂಖ್ಯೆಯಿರುವ ಕೋಣೆಗೆ ಹೋಗಿ ನಂತರ ಆ ಸಂಖ್ಯೆಯ ಇಮ್ಮಡಿ ಸಂಖ್ಯೆ ಇರುವ ಕೋಣೆಯೊಳಗೆ ಹಾದು ಹೋಗಿ ಇದೇ ರೀತಿ ಮುಂದುವರಿದರೆ ಗುರಿಯನ್ನು ತಲುಪಬಹುದು.



| | | | | | |
|---|---|---|---|---|---|
| 1 | 2 | 4 | 8 | 16 | 18 |
| 5 | 4 | 6 | 42 | 14 | 36 |
| 10 | 8 | 16 | 32 | 64 | 72 |
| 20 | 88 | 32 | 126 | 456 | 48 |
| 40 | 36 | 64 | 128 | 256 | 512 |
| 80 | 100 | 128 | 500 | 1000 | 1024 |



- ವ್ಯಾಪಾರಿಯಾಗಿರುವ ಅಬು 445 ರೂಪಾಯಿಗೆ ಪಡಕೊಂಡ ತರಕಾರಿಗಳನ್ನು 660 ರೂಪಾಯಿಗೂ 415 ರೂಪಾಯಿಗೆ ಪಡಕೊಂಡ ಬಾಳೆಹಣ್ಣುಗಳನ್ನು 600 ರೂಪಾಯಿಗೂ ಮಾರಿದನು.

  ಇವುಗಳನ್ನು ಪಡಕೊಳ್ಳಲು ಅಬುವಿಗೆ ಎಷ್ಟು ರೂಪಾಯಿ ಬೇಕಾಗಬಹುದು? ಇವೆರಡನ್ನೂ ಮಾರಿದಾಗ ಎಷ್ಟು ರೂಪಾಯಿ ಸಿಕ್ಕಿತು?

## ಮುಂದಿನ ಸಂಖ್ಯೆಗಳನ್ನು ಕಂಡುಹಿಡಿಯಬಹುದೇ?

- 10, 30, 50, 70, ........ ........ ........
- 120, 140, 160, 180, ........ ........ ........
- 555, 565, 575, 585, ........ ........ ........
- 225, 250, 275, 300, ........ ........ ........
- 100, 110, 130, 160, ........ ........ ........

## ಕೂಡಿಸಿ ನೋಡಿರಿ

- ಅಡ್ಡಕ್ಕೂ ನೀಟಕ್ಕೂ ಕೂಡಿಸಿದರೆ 450 ಸಿಗುವ ರೀತಿಯಲ್ಲಿ ಕ್ರಮೀಕರಿಸಿರಿ.

| | | | | | | | | | | | | | | | | | | |
|---|---|---|---|---|---|---|---|---|---|---|---|---|---|---|---|---|---|---|
| 10 | + | 20 | + | 30 | + | 40 | + | 50 | + | 60 | + | 70 | + | 80 | + | 90 | = | 450 |
| 20 | + | 40 | + | 70 | + | 90 | + | 10 | + | 50 | + | 80 | + | 30 | + | 60 | = | 450 |
| 30 | + | 90 | + | ........ | | ........ | | ........ | | ........ | | ........ | | ........ | | ........ | = | ........ |
| 40 | + | 10 | + | ........ | | ........ | | ........ | | ........ | | ........ | | ........ | | ........ | = | ........ |
| 50 | + | 60 | + | ........ | | ........ | | ........ | | ........ | | ........ | | ........ | | ........ | = | ........ |
| 60 | + | 70 | + | ........ | | ........ | | ........ | | ........ | | ........ | | ........ | | ........ | = | ........ |
| 70 | + | 80 | + | ........ | | ........ | | ........ | | ........ | | ........ | | ........ | | ........ | = | ........ |
| 80 | + | 50 | + | ........ | | ........ | | ........ | | ........ | | ........ | | ........ | | ........ | = | ........ |
| 90 | + | 30 | + | ........ | | ........ | | ........ | | ........ | | ........ | | ........ | | ........ | = | ........ |
| 450 | | 450 | | | | | | | | | | | | | | | | |

## ಸಂಖ್ಯೆಯೂ ಸಂಖ್ಯೆಯೂ

| | | | | | | | | | | | |
|---|---|---|---|---|---|---|---|---|---|---|---|
| 5 | 4 | 3 | 2 | 1 | + | 1 | 2 | 3 | 4 | 5 | + |
| | 4 | 3 | 2 | 1 | | 1 | 2 | 3 | 4 | | |
| | | 3 | 2 | 1 | | 1 | 2 | 3 | | | |
| | | | 2 | 1 | | 1 | 2 | | | | |
| | | | | 1 | | 1 | | | | | |
| **5** | **8** | **9** | **8** | **5** | | | | | | | |

| | | | | | | | | | |
|---|---|---|---|---|---|---|---|---|---|
| 2 | 4 | 6 | 8 | + | 8 | 6 | 4 | 2 | + |
| 2 | 4 | 6 | | | | 6 | 4 | 2 | |
| 2 | 4 | | | | | | 4 | 2 | |
| 2 | | | | | | | | 2 | |
| **9** | **3** | **2** | **8** | | | | | | |

# 3

# ತೆಗೆಯುವ

## ಅಂಗಡಿಯತ್ತ

ಇದು ಚಿಂತಾಪುರ ಯು.ಪಿ. ಶಾಲೆಯ ಮಕ್ಕಳ ಅಂಗಡಿಯಾಗಿದೆ.

- ಅಂಗಡಿಯಲ್ಲಿರುವ ಸ್ಟೋಕ್ ಬೋರ್ಡನ್ನು (ಸಂಗ್ರಹ ಸೂಚಕ ಫಲಕ) ಓದಿ ನೋಡಿರಿ.
- ಪ್ರತಿಯೊಂದು ವಸ್ತುಗಳ ಸಂಗ್ರಹ ಎಷ್ಟೆಷ್ಟು ಇದೆ?
- ಇವತ್ತಿನ ಮಾರಾಟವೋ?

**ಸ್ಟೋಕ್ ಬೋರ್ಡ್**

| ಬೆಲೆ | ವಸ್ತುಗಳು | ಸ್ಟೋಕ್ |
|---|---|---|
| 10 | ನೋಟುಪುಸ್ತಕ | 100 |
| 6 | ಪೆನ್ನು | 50 |
| 3 | ಪೆನ್ಸಿಲು | 75 |




■ ಇವತ್ತಿನ ಮಾರಾಟದ ನಂತರ ಪ್ರತಿಯೊಂದು ವಸ್ತು ಎಷ್ಟು ಬಾಕಿಯಿದೆ?


- ಹೇಗೆ ಕಂಡುಹಿಡಿಯಬಹುದು?

**ನಾನು ಕಂಡುಹಿಡಿದ ವಿಧಾನ**



| | |
|---|---|
| ನೋಟುಪುಸ್ತಕ | |
| ಪೆನ್ನು | |
| ಪೆನ್ಸಿಲು | |

- ಮರುದಿವಸ 72 ನೋಟುಪುಸ್ತಕಗಳನ್ನೂ 100 ಪೆನ್ನುಗಳನ್ನೂ 125 ಪೆನ್ಸಿಲುಗಳನ್ನೂ ತೆಗೆದುಕೊಂಡು ಬಂದರು. ಈಗ ಪ್ರತಿಯೊಂದು ವಸ್ತುಗಳು ಎಷ್ಟೆಷ್ಟು ಇವೆ?




- ಅಮ್ಮು ಇವುಗಳನ್ನು ಖರೀದಿಸಿದಳು. ಇನ್ನು ಅಂಗಡಿಯಲ್ಲಿ ಬಾಕಿಯಿರುವ ಪ್ರತಿಯೊಂದು ವಸ್ತುಗಳೆಷ್ಟು?

■ ಹೇಗೆ ಕಂಡುಹಿಡಿಯಬಹುದು?


**ನಾನು ಕಂಡುಹಿಡಿದ ವಿಧಾನ**




**ಸಹಪಾಠಿಗಳು ಕಂಡುಹಿಡಿದ ವಿಧಾನ**




## ವಿಜ್ಞಾನ ಮಾಸಪತ್ರಿಕೆ




■ ಅಮ್ಮುವಿನ ಕೈಯಲ್ಲಿ ಎಷ್ಟು ರೂಪಾಯಿ ಬಾಕಿ ಇರಬಹುದು?

- ಹೇಗೆ ಕಂಡುಹಿಡಿಯುವಿರಿ?



■ 175 ರೂಪಾಯಿ ಎಂದರೆ 100 + 70 + 5



■ 156 ರೂಪಾಯಿ ಎಂದರೆ 100 + 50 + 6

- 7 ಹತ್ತು ರೂಪಾಯಿಗಳಿಂದ 1 ಹತ್ತು ರೂಪಾಯಿಯನ್ನು ತೆಗೆದು 5 ರೂಪಾಯಿಯೊಂದಿಗೆ ಕೂಡಿಸಿದರೋ?

| | | | | | |
|---|---|---|---|---|---|
| 100 | + | 60 | + | 15 | – |
| 100 | + | 50 | + | 6 | |
| | | | | | |

ಎಂದು ಸಿಗುವುದು.

**ಇದನ್ನು ಹೀಗೆ ಬರೆಯುವ**


| ನೂರುಗಳು | ಹತ್ತುಗಳು | ಒಂದುಗಳು | |
|---|---|---|---|
| 1 | 7 | 5 | – |
| 1 | 5 | 6 | |
| | | | |

| ನೂರುಗಳು | ಹತ್ತುಗಳು | ಒಂದುಗಳು | |
|---|---|---|---|
| 1 | 6 | 15 | – |
| 1 | 5 | 6 | |
| 0 | 1 | 9 | |

| | | | |
|---|---|---|---|
| | 6 | | |
| 1 | 7 | 15 | – |
| 1 | 5 | 6 | |
| | 1 | 9 | |

## ಕಲಿಕಾ ಸಹಾಯ ನಿಧಿ


ಅಮ್ಮುವಿನ ಕ್ಲಾಸಿನಲ್ಲಿರುವ ಎಲ್ಲರೂ ಕಲಿಕಾ ಸಹಾಯ ನಿಧಿಗೆ ದೇಣಿಗೆ ನೀಡಿದರು.




- ಹಾಗಾದರೆ ಅದರಲ್ಲಿ ಹುಡುಗಿಯರ ಪಾಲು ಎಷ್ಟು?

- ಹೇಗೆ ಕಂಡುಹಿಡಿಯುವಿರಿ?
  - 436 ರಿಂದ 248 ನ್ನು ಕಳೆದರೆ ಸಾಕಲ್ಲವೇ?
- ದಾರಿ ಯಾವುದು?

*6 ರೂಪಾಯಿಗಳಿಂದ 8 ರೂಪಾಯಿಗಳನ್ನೂ, 3 ಹತ್ತು ರೂಪಾಯಿಗಳಿಂದ 4 ಹತ್ತು ರೂಪಾಯಿಗಳನ್ನೂ ತೆಗೆಯಲು ಸಾಧ್ಯವಿಲ್ಲ.*





436

*436 ರಲ್ಲಿರುವ 3 ಹತ್ತು ರೂಪಾಯಿಗಳಿಂದ 1 ಹತ್ತು ರೂಪಾಯಿಯನ್ನು 6 ರೂಪಾಯಿಯೊಂದಿಗೆ ಸೇರಿಸಿದರೋ?*



400 + 30 + 6 –
200 + 40 + 8

→

400 + 20 + 16 –
200 + 40 + 8

*ಮುಂದಿನದು, 2 ಹತ್ತುಗಳಿಂದ 4 ಹತ್ತುಗಳನ್ನು ....... 4 ನೂರು ರೂಪಾಯಿಗಳಿವೆ. ಇದರಲ್ಲಿ ಒಂದು ನೂರು ರೂಪಾಯಿಯನ್ನು ಹತ್ತುಗಳನ್ನಾಗಿ ಮಾಡಿದರೋ?*



ಆಗ →

300 + 120 + 16 –
200 + 40 + 8

ಎಂದು ಬರೆಯಬಹುದು.

ಅಂದರೆ

400 + 30 + 6 –
200 + 40 + 8

→

400 + 20 + 16 –
200 + 40 + 8

→

300 + 120 + 16 –
200 + 40 + 8

**100 + 80 + 8**

ಇದುವರೆಗೆ ಬರೆದುದನ್ನು ಹೀಗೆ ಬದಲಾಯಿಸಿ ಬರೆಯಬಹುದು.

| ನೂರುಗಳು | ಹತ್ತುಗಳು | ಒಂದುಗಳು |
|---|---|---|
| 4 | 2<br>3 | 6 |
| 2 | 4 | 8 |
| | | |

–

| ನೂರುಗಳು | ಹತ್ತುಗಳು | ಒಂದುಗಳು |
|---|---|---|
| 3<br>4 | 2 | 16 |
| 2 | 4 | 8 |
| | | |

–

| ನೂರುಗಳು | ಹತ್ತುಗಳು | ಒಂದುಗಳು |
|---|---|---|
| 3 | 12 | 16 |
| 2 | 4 | 8 |
| 1 | 8 | 8 |

–


ಇದನ್ನು ಸಂಕ್ಷೇಪಿಸಿ

| | | | |
|---|---|---|---|
| 3 | 12<br>2 | 16 | |
| 4 | 3 | 6 | – |
| 2 | 4 | 8 | |
| **1** | **8** | **8** | |

$$\begin{array}{r} 436 \; - \\ 248 \\ \hline \mathbf{188} \end{array}$$

ಎಂದು ಬರೆಯಬಹುದು.

$$\begin{array}{r} 436 \; - \\ 248 \\ \hline \mathbf{188} \end{array}$$ ಸರಿಯಾಗಿದೆಯೋ ಎಂದು ತಿಳಿಯಲು $$\begin{array}{r} 188 \; + \\ 248 \\ \hline \mathbf{436} \end{array}$$ ಎಂದು ನೋಡಿದರೆ ಸಾಕು








- ತಾಯಿಯ ಕೈಯಲ್ಲಿ ನೂರು ರೂಪಾಯಿಯ 4 ನೋಟುಗಳು, ಹತ್ತು ರೂಪಾಯಿಯ 5 ನೋಟುಗಳು ಇವೆ. ಅದರಿಂದ 120 ರೂಪಾಯಿಯನ್ನು ಅನುವಿಗೆ ಕೊಟ್ಟಳು. ತಾಯಿಯ ಕೈಯಲ್ಲಿ ಈಗ ಎಷ್ಟು ರೂಪಾಯಿ ಇದ್ದೀತು? ಅವು ಯಾವ ನೋಟುಗಳಾಗಿರಬಹುದು?

## ಕತೆ ಪುಸ್ತಕ

ಅಮ್ಮು, ಪುಸ್ತಕದ ಅಂಗಡಿಯಿಂದ ಕತೆ ಪುಸ್ತಕವನ್ನು ಕೊಂಡು ಕೊಂಡಳು.













- ಅಮ್ಮು ಕೊಂಡುಕೊಂಡ ಕತೆ ಪುಸ್ತಕದ ಬೆಲೆ ಎಷ್ಟು? [ ]
  - ಅಮ್ಮು 250 ರೂಪಾಯಿ ತಾಯಿಗೆ ಕೊಟ್ಟಳು.
    ತಾಯಿ ಒಂದು ಬ್ಯಾಗನ್ನು ಖರೀದಿಸಿದಳು.
- ಇನ್ನು ಅಮ್ಮುವಿನ ಕೈಯಲ್ಲಿ ಎಷ್ಟು ರೂಪಾಯಿ ಇದೆ? [ ]


## ಬ್ಯಾಂಕಿನತ್ತ




- ಅಮ್ಮುವಿನ ತಾಯಿಯು ಬ್ಯಾಂಕಿನಿಂದ ಎಷ್ಟು ರೂಪಾಯಿಯನ್ನು ಹಿಂದಕ್ಕೆ ಪಡೆದುಕೊಂಡಳು? [ ]

## ಅಕ್ಕಿಯಂಗಡಿಯಲ್ಲಿ

ಅಮ್ಮುವಿನ ತಂದೆಯು ಅಕ್ಕಿ ತರಲು ಅಂಗಡಿಗೆ ಹೋದರು.




■ ಬಾಕಿ ಹಣವನ್ನು ಅಮ್ಮುವಿನ ಅಣ್ಣನು ಕೊಟ್ಟನು. ಅಣ್ಣನು ಎಷ್ಟು ರೂಪಾಯಿಯನ್ನು ಕೊಟ್ಟನು?

ನಾನು ಕಂಡುಹಿಡಿದ ವಿಧಾನ



ಸಹಪಾಠಿಗಳು ಕಂಡುಹಿಡಿದ ವಿಧಾನ




## ಕ್ರಿಕೆಟ್

ಅಮ್ಮು ಕ್ರಿಕೆಟ್ ಆಟವನ್ನು ನೋಡುತ್ತಿದ್ದಳು.




ಭಾರತಕ್ಕೆ ಶ್ರೀಲಂಕಾದ ರನ್ನಿನಷ್ಟಾಗಲು ಇನ್ನು ಎಷ್ಟು ರನ್ನುಗಳು ಬೇಕು?




■ ಹೇಗೆ ಕಂಡುಹಿಡಿಯಬಹುದು?

ನಾನು ಕಂಡುಹಿಡಿದ ವಿಧಾನ



ಸಹಪಾಠಿಗಳು ಕಂಡುಹಿಡಿದ ವಿಧಾನ





ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ಕ್ರಿಕೆಟ್ ತಂಡವು 243 ರನ್ನುಗಳನ್ನು ಗಳಿಸಿತು. ವಿರುದ್ಧ ತಂಡಕ್ಕೆ 198 ರನ್ನುಗಳನ್ನು ಮಾತ್ರವೇ ಗಳಿಸಲು ಸಾಧ್ಯವಾಯಿತು. ಭಾರತ ತಂಡವು ಗಳಿಸಿದ ಅಧಿಕ ರನ್ನುಗಳೆಷ್ಟು?

## ಶಾಲೆಯತ್ತ

ಅಮ್ಮುವಿನ ಶಾಲೆಗೆ ಕೃಷಿ ಭವನದಿಂದ ತರಕಾರಿ ಬೀಜಗಳನ್ನು ವಿತರಣೆಗಾಗಿ ತೆಗೆದುಕೊಂಡು ಬಂದರು.




■ ಇನ್ನು ಎಷ್ಟು ಪ್ಯಾಕೇಟ್‌ಗಳು ಬಾಕಿ ಇವೆ?

### ಅಜ್ಜಿಯ ಪ್ರಾಯ




ಇವರ ಪ್ರಾಯಗಳೊಳಗಿನ ವ್ಯತ್ಯಾಸ ಎಷ್ಟು?


■ ಬಾಕಿ ಇರುವ ಪ್ಯಾಕೆಟ್‌ಗಳಲ್ಲಿ 2, 3, 4, 5 ತರಗತಿಗಳಿಗೆ 329 ಪ್ಯಾಕೇಟ್‌ಗಳನ್ನು ವಿತರಿಸಿದರೆ ಒಂದನೇ ತರಗತಿಗೆ ವಿತರಿಸಲು ಎಷ್ಟು ಪ್ಯಾಕೇಟ್‌ಗಳು ಬಾಕಿ ಇರಬಹುದು?



ಒಂದು ಸಣ್ಣ ಇರುವೆ ಸಂಗ್ರಹಿಸಿದ 686 ಭತ್ತದ ಕಾಳುಗಳಲ್ಲಿ 247 ನ್ನು ಚಿಕ್ಕ ಅಳಿಲ ಮರಿಗೂ 265 ನ್ನು ಅಂದವಾದ ಗಿಳಿಮರಿಗೂ ಕೊಟ್ಟಿತು. ಸಣ್ಣ ಇರುವೆಯ ಸಂಗ್ರಹದಲ್ಲಿ ಈಗ ಎಷ್ಟು ಭತ್ತದ ಕಾಳುಗಳಿವೆ?

## ಮಧ್ಯಾಹ್ನದೂಟ

ಎಲ್ಲಾ ದಿವಸಗಳಲ್ಲೂ ಸಮೃದ್ಧವಾದ ಮಧ್ಯಾಹ್ನದೂಟವನ್ನು ಅಮ್ಮುವಿನ ಶಾಲೆಯಲ್ಲಿ ನೀಡುತ್ತಾರೆ.




■ ಹಾಗಾದರೆ 3 ದಿವಸಗಳಲ್ಲಿ ಎಷ್ಟು ಕಿ.ಗ್ರಾಂ. ಅಕ್ಕಿ ಉಪಯೋಗಿಸಲಾಯಿತು?

## ಹಾಲು ವಿತರಣೆ







- ನಿಮಗೆ ಸಹಾಯ ಮಾಡಬಹುದೇ?



ಹಣ್ಣಿನಂಗಡಿಯ ಸೇಬು ಹಣ್ಣಿನ ಪೆಟ್ಟಿಗೆಯಲ್ಲಿ ಬೆಳಗ್ಗೆ 325 ಸೇಬುಗಳಿದ್ದುವು. ಈಗ 98 ಸೇಬುಗಳು ಬಾಕಿಯಿದ್ದರೆ ಮಾರಾಟ ಮಾಡಿದ ಸೇಬುಗಳೆಷ್ಟು?

## ಸಮವಸ್ತ್ರ

ಚಿಂತಾಪುರ ಶಾಲೆಯಲ್ಲಿ 167 ಮೀಟರ್ ಲಂಗದ ಬಟ್ಟೆಯೂ 118 ಮೀಟರ್ ಅಂಗಿಯ ಬಟ್ಟೆಯೂ ದಾಸ್ತಾನಿದೆ. ಅದರೊಂದಿಗೆ ಈ ವರ್ಷ ಹೊಸತಾಗಿ 495 ಮೀಟರ್ ಲಂಗದ ಬಟ್ಟೆಯನ್ನೂ 345 ಮೀಟರ್ ಅಂಗಿಯ ಬಟ್ಟೆಯನ್ನೂ ತೆಗೆದುಕೊಂಡು ಬಂದರು. ವಿತರಿಸಿದ ನಂತರ 175 ಮೀಟರ್ ಲಂಗದ ಬಟ್ಟೆಯೂ, 145 ಮೀಟರ್ ಅಂಗಿಯ ಬಟ್ಟೆಯೂ ಉಳಿಯಿತು. ಈ ವರ್ಷ ಎಷ್ಟು ಮೀಟರ್ ಬಟ್ಟೆಯನ್ನು ವಿತರಿಸಲಾಯಿತು?



■ ಹೇಗೆ ಕಂಡುಹಿಡಿಯಬಹುದು?

- ಒಂದು ಪಟ್ಟಿಯಲ್ಲಿ ಬರೆದರೆ?
- ಯಾವ ಯಾವ ಮಾಹಿತಿಗಳನ್ನು ಬರೆಯಬೇಕು?
- 
- 

**ನಾನು ಕಂಡುಹಿಡಿದ ವಿಧಾನ**





**ಸಹಪಾಠಿಗಳು ಕಂಡುಹಿಡಿದ ವಿಧಾನ**



| | |
|---|---|
| ಏನು ಕಂಡುಹಿಡಿಯಬೇಕೆಂದು ತಿಳಿಯಿತು | |
| ಅಗತ್ಯವಾದ ಮಾಹಿತಿಗಳನ್ನು ಕಂಡುಹಿಡಿದು ಪಟ್ಟಿಯಲ್ಲಿ ಬರೆದೆನು | |
| ಮಾಡಿದ ಕ್ರಿಯೆಗಳು ಸರಿಯಾಗಿವೆ | |
| ಬೇರೆ ರೀತಿಗಳೂ ಇವೆಯೆಂದು ತಿಳಿಯಿತು | |

## ಮಕ್ಕಳ ದಿನಾಚರಣೆಯ ರ್‍ಯಾಲಿ

ಸ್ಕೌಟು, ಗೈಡ್, ರೆಡ್‌ಕ್ರಾಸ್ ಎಂಬಿವುಗಳ ಮಕ್ಕಳು ನಡೆಸಿದ ರ್‍ಯಾಲಿಯಲ್ಲಿ 296 ಹುಡುಗರೂ, 336 ಹುಡುಗಿಯರೂ ಇದ್ದರು. ಅದರಲ್ಲಿ 186 ಮಂದಿ ಸ್ಕೌಟುಗಳೂ 177 ಮಂದಿ ಗೈಡುಗಳೂ ಆಗಿದ್ದರೆ, ರೆಡ್‌ಕ್ರಾಸ್ ವಿಭಾಗಕ್ಕೆ ಸೇರಿದವರು ಎಷ್ಟು ಮಂದಿ?




**ನಾನು ಕಂಡುಹಿಡಿದ ವಿಧಾನ**



**ಸಹಪಾಠಿಗಳು ಕಂಡುಹಿಡಿದ ವಿಧಾನ**






**ಕಳೆದುದು ಸರಿಯಾಗಿದೆಯೋ ಎಂದು ನಾನು ಪರಿಶೋಧಿಸಿದ ರೀತಿ**

## ವಿಜ್ಞಾನ ಮೇಳ

ವಿಜ್ಞಾನ ಮೇಳವು ಅಮ್ಮುವಿನ ಶಾಲೆಯಲ್ಲಿ ನಡೆಯಿತು.



*ಮೊದಲ ದಿವಸ 386 ಮಂದಿಯೂ ಎರಡನೇ ದಿವಸ 637 ಮಂದಿಯೂ ಊಟ ಮಾಡಿದರು.*




- ಅತಿ ಹೆಚ್ಚು ಮಂದಿ ಊಟ ಮಾಡಿದ್ದು ಯಾವ ದಿವಸ? ಎಷ್ಟು ಮಂದಿ ಹೆಚ್ಚು?

- ವಿಜ್ಞಾನ ಮೇಳಕ್ಕೆ 1000 ಕುರ್ಚಿಗಳನ್ನು ತಂದಿದ್ದರು. ಸಭಾಂಗಣದಲ್ಲಿ ಸ್ಥಳದ ಕೊರತೆಯಿಂದಾಗಿ 186 ಕುರ್ಚಿಗಳನ್ನು ವಾಪಾಸು ಕೊಂಡುಹೋದರು. ಹಾಗಾದರೆ ಎಷ್ಟು ಕುರ್ಚಿಗಳನ್ನು ಉಪಯೋಗಿಸಿದರು?



1000 ದಿಂದ 1ನ್ನು ಕಳೆದ ನಂತರ 186 ನ್ನು ಕಳೆದು ಬಂದ ಉತ್ತರದೊಂದಿಗೆ 1 ನ್ನು ಕೂಡಿಸಿದರೆ ಸಾಕು.

$1000 - 1 = 999$

$999 - 186 = 813$

$813 + 1 = 814$

$1000 - 186 = 814$

1000 ದಿಂದಲೂ, 186 ರಿಂದಲೂ 1 ನ್ನು ಕಳೆದು ಬಂದ ಉತ್ತರಗಳನ್ನು ಕಳೆದು ನೋಡಿರಿ. ಉತ್ತರವು ಮೊದಲಿನದಕ್ಕೆ ಸಮಾನವಾಗಿದೆಯೇ?

$1000 - 1 = 999$

$186 - 1 = 185$

$999 - 185 = 814$

$1000 - 186 = 814$

$1000 - 186 = 999 - 185$

### ಸಂಖ್ಯಾಗೋಪುರ

ಹತ್ತಿರವಿರುವ ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆದು ಪೂರ್ತಿಗೊಳಿಸಿರಿ.


| | | | |
|---|---|---|---|
| | | | |
| | | | |
| | | 240 | |
| 885 | 526 | 396 | |



- ಶಾಲಾ ಸೊಸೈಟಿಯಲ್ಲಿದ್ದ 240 ನೋಟುಪುಸ್ತಕಗಳಲ್ಲಿ ಅರ್ಧಭಾಗವನ್ನು ಮಾರಾಟ ಮಾಡಲಾಯಿತು. ಹಾಗಾದರೆ ಈಗ ಎಷ್ಟು ನೋಟು ಪುಸ್ತಕಗಳು ಸ್ಟೋಕಿವೆ?
- ವ್ಯಾಪಾರಿಯಾದ ರಾಮು 545 ರೂಪಾಯಿಗೆ ಪಡಕೊಂಡ ಸುವರ್ಣಗಡ್ಡೆಯನ್ನು 637 ರೂಪಾಯಿಗೂ, 232 ರೂಪಾಯಿಗೆ ಖರೀದಿಸಿದ ಬೆಂಡೆಕಾಯಿಯನ್ನು 365 ರೂಪಾಯಿಗೂ ಮಾರಾಟ ಮಾಡಿದರೆ ಪ್ರತಿಯೊಂದು ವಸ್ತುವಿಗೂ ಎಷ್ಟು ರೂಪಾಯಿ ಹೆಚ್ಚು ಲಭಿಸಿತು? ಒಟ್ಟು ಎಷ್ಟು ರೂಪಾಯಿ ಹೆಚ್ಚು ಸಿಕ್ಕಿತು?
- ಒಂದೇ ರೀತಿಯ ವಸ್ತುಗಳನ್ನು ಅಮ್ಮು 903 ರೂಪಾಯಿಗೆ ಬಾಬು ಸ್ಟೋರಿನಿಂದಲೂ, ಅನು 784 ರೂಪಾಯಿಗೆ ಮಾವೇಲಿ ಸ್ಟೋರಿನಿಂದಲೂ ಖರೀದಿಸಿದರು. ಎಲ್ಲಿಂದ ಖರೀದಿಸಿದರೆ ಲಾಭದಾಯಕ? ಎಷ್ಟು ರೂಪಾಯಿ ಲಾಭವಾಗಿ ಸಿಗುವುದು?
- ಸ್ವಾತಂತ್ರ್ಯ ದಿನದಂದು ವಿತರಿಸಲು 840 ಲಡ್ಡುಗಳನ್ನು ಪಿ.ಟಿ.ಎ. ಯವರು ಖರೀದಿಸಿದರು. ಒಂದನೇ ಕ್ಲಾಸಿನಲ್ಲಿ 89, ಎರಡನೇ ಕ್ಲಾಸಿನಲ್ಲಿ 93, ಮೂರನೇ ಕ್ಲಾಸಿನಲ್ಲಿ 87, ನಾಲ್ಕನೇ ಕ್ಲಾಸಿನಲ್ಲಿ 98 ಮತ್ತು ಐದನೇ ಕ್ಲಾಸಿಲ್ಲಿ 102 ಮಕ್ಕಳು ಇದ್ದಾರೆ. ಒಂದೊಂದು ಲಡ್ಡುವಿನಂತೆ ಹಂಚಿದರೆ ಎಷ್ಟು ಲಡ್ಡುಗಳು ಬಾಕಿ ಉಳಿಯುವುದು. ಎರಡರಂತೆ ಹಂಚಿದರೆ ಇನ್ನೂ ಎಷ್ಟು ಲಡ್ಡುಗಳು ಬೇಕಾಗಬಹುದು?
- ಗಣಿತಮಲೆ ಯು.ಪಿ. ಶಾಲೆಯಲ್ಲಿ ಎಲ್.ಪಿ. ವಿಭಾಗದಲ್ಲಿ 292 ಮಕ್ಕಳು ಮತ್ತು ಯು.ಪಿ. ವಿಭಾಗದಲ್ಲಿ 345 ಮಕ್ಕಳಿದ್ದಾರೆ. ಒಟ್ಟು ಮಕ್ಕಳಲ್ಲಿ 349 ಮಂದಿ ಹುಡುಗರಾದರೆ ಹುಡುಗಿಯರ ಸಂಖ್ಯೆ ಎಷ್ಟು? ಹುಡುಗರ ಸಂಖ್ಯೆ ಹೆಚ್ಚೋ, ಹುಡುಗಿಯರ ಸಂಖ್ಯೆ ಹೆಚ್ಚೋ? ಎಷ್ಟು ಹೆಚ್ಚು?


## ಇಲಿ ಮತ್ತು ಬೆಕ್ಕು

ಗಂಡು ಬೆಕ್ಕು ಚಿಕ್ಕಲಿಯನ್ನು ಹಿಡಿಯಲು ಕಾದುಕುಳಿತಿದೆ. ಸುತ್ತಲೂ ಇರುವ ಗೋಡೆಯ ದಾರಿಯಲ್ಲಿ ಚಿಕ್ಕಲಿಗೆ ಪಾರಾಗಬಹುದು. ಗೋಡೆಯ ಒಂದು ಭಾಗದಲ್ಲಿ, ಮಧ್ಯದ ಕೋಣೆಯಲ್ಲಿ ಕೊಟ್ಟಿರುವ ಸಂಖ್ಯೆಗಳ ವ್ಯತ್ಯಾಸವಾಗಿ ಬಾರದಿರುವ ಒಂದು ಸಂಖ್ಯೆಯಿದೆ. ಅದನ್ನು ಕಂಡುಹಿಡಿದು ಅದರ ಮೂಲಕ ಪಾರಾಗಲು ಚಿಕ್ಕಲಿಗೆ ಸಹಾಯ ಮಾಡಬಹುದೇ?



## ವ್ಯತ್ಯಾಸವನ್ನು ಬರೆಯುವ

ಮಧ್ಯದ ಸಂಖ್ಯೆ ವ್ಯತ್ಯಾಸವಾಗಿ ಸಿಗುವ ರೀತಿಯಲ್ಲಿ ಚಕ್ರದೊಳಗೆ ಎಲ್ಲಾ ಸಂಖ್ಯೆಗಳನ್ನು ಬರೆಯಿರಿ.




## ಸಮಾಧಾನ

| 0 | 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|---|
| ಮಾ | ಸ | ಗ | ಳ | ಲ್ಲಿ | ಮೇ | ಷ | ಪ್ರ | ಧಾ | ನ |


- ಸೊನ್ನೆ ಬಾರದಿರುವ ಮತ್ತು ಅಂಕೆಗಳು ಆವರ್ತಿಸದೆ ಇರುವ ಒಂದು ಮೂರಂಕೆ ಸಂಖ್ಯೆಯನ್ನು ಬರೆಯಿರಿ.
- ಆ ಸಂಖ್ಯೆಯನ್ನು ತಿರುಗಿಸಿ ಬರೆಯಿರಿ.
- ದೊಡ್ಡ ಸಂಖ್ಯೆಯಿಂದ ಸಣ್ಣ ಸಂಖ್ಯೆಯನ್ನು ಕಳೆಯಿರಿ.
- ಉತ್ತರವಾಗಿ ಸಿಕ್ಕಿದ ಸಂಖ್ಯೆಯನ್ನು ಮೊದಲು ಮಾಡಿದಂತೆ ತಿರುಗಿಸಿ ಬರೆಯಿರಿ.
- ಉತ್ತರವಾಗಿ ಸಿಕ್ಕಿದ ಸಂಖ್ಯೆಯನ್ನು ಮತ್ತು ತಿರುಗಿಸಿ ಬರೆದ ಸಂಖ್ಯೆಯನ್ನು ಕೂಡಿಸಿ ನೋಡಿ.
- ಸಿಕ್ಕಿದ ಸಂಖ್ಯೆಯ ಅಂಕೆಗಳಿಗೆ ಅನುಸರಿಸಿ ಅಕ್ಷರಗಳನ್ನು ಬರೆದು ನೋಡಿರಿ.

## ಸಂಖ್ಯಾಶ್ರೇಣಿಯನ್ನು ಪೂರ್ತಿಗೊಳಿಸಿರಿ

1. 100, 90, 80, ......, ......, ......
2. 128, 64, 32, ......, ......, ......
3. 900, 800, 700, ......, ......, ......
4. 780, 680, 580, ......, ......, ......
5. 300, 250, 200, ......, ......, ......
6. 350, 290, 240 ......, ......, ......

## ಬೀಗಗಳೂ ಬೀಗದ ಕೀಲಿಗಳೂ

ಶಾಲೆಗೆ ಬಾಗಿಲು ಹಾಕಲು ಆರಂಭಿಸಿದಾಗ ಬೀಗಗಳು ಮತ್ತು ಬೀಗದ ಕೀಲಿಗಳು ಪರಸ್ಪರ ಅದಲು ಬದಲಾಗಿರುವುದು ಗಮನಕ್ಕೆ ಬಂತು. ಆದರೆ ಬೀಗ ಮತ್ತು ಬೀಗದ ಕೀಲಿಗಳಲ್ಲಿ ನೀಡಿರುವ ಕ್ರಿಯೆ ಮಾಡಿದರೆ ಸಮಸ್ಯೆಯನ್ನು ಪರಿಹರಿಸಬಹುದು.




### ಒಂಬತ್ತು ಮತ್ತು ನಾನು

| | | |
|---|---|---|
| 990 - 099 = 891 | 963 - 369 = 594 | 936 - 639 = 297 |
| 981 - 189 = 792 | 954 - 459 = 495 | 927 - 729 = 198 |
| 972 - 279 = 693 | 945 - 549 = 396 | 918 - 819 = 099 |

### ವಿಶೇಷತೆ ಕಂಡುಹಿಡಿಯಿರಿ

| | |
|---|---|
| 994 - 90 = 904 | 993 - 90 = 903 |
| 994 - 180 = 814 | 993 - 180 = 813 |
| 994 - 270 = 724 | 993 - 270 = 723 |
| 994 - 360 = 634 | 993 - 360 = 633 |
| 994 - 450 = 544 | 993 - 450 = 543 |
| 994 - 540 = 454 | 993 - 540 = 453 |
| 994 - 630 = 364 | 993 - 630 = 363 |
| 994 - 720 = 274 | 993 - 720 = 273 |
| 994 - 810 = 184 | 993 - 810 = 183 |

ಇದೇ ರೀತಿಯಲ್ಲಿ ಇನ್ನೊಂದನ್ನು ತಯಾರಿಸಿರಿ.

## 4

# ಆಕೃತಿಗಳು ಸೇರುವಾಗ




ಚಿತ್ರವನ್ನು ಗಮನಿಸಿರಿ.

ಯಾವೆಲ್ಲ ಆಕೃತಿಗಳು ಚಿತ್ರದಲ್ಲಿವೆ? ನಿಮಗೆ ಹೇಳಬಹುದೇ?

| | | |
|---|---|---|
| | | |

ಆಯತಾಕಾರದಲ್ಲಿರುವುದು ಯಾವುವು? ..............................................

ಉರುಟಾಗಿರುವುದೋ? ..........................................................................


ತ್ರಿಕೋನವೋ? ...............................................................................


## ಬಣ್ಣ ಹಚ್ಚಿರಿ

ಅಪ್ಪು ಬಣ್ಣ ಹಚ್ಚುವುದನ್ನು ನೋಡಿರಿ.




ಕೆಳಗೆ ಕೊಟ್ಟಿರುವ ಚಿತ್ರಗಳಿಗೆ ನೀವು ಬಣ್ಣ ಹಚ್ಚಿ ನೋಡಿರಿ.
ಆಯತಕ್ಕೆ ನೀಲಿ ಮತ್ತು ತ್ರಿಕೋನಕ್ಕೆ ಕೆಂಪು ಆದರೋ?






ಕೆಳಗೆ ಕೊಟ್ಟಿರುವ ಚಿತ್ರಗಳಿಗೆ ಇಷ್ಟವಿರುವ ಬಣ್ಣಗಳನ್ನು ಹಚ್ಚಿ ಅಂದಗೊಳಿಸಿರಿ.






## ಸೇರಿಸಿ ಇಡುವ

ಆಕೃತಿಗಳನ್ನು ಸೇರಿಸಿಟ್ಟು ಚಿತ್ರಗಳನ್ನು ಮಾಡಿದರೋ? ಗಣಿತ ಲ್ಯಾಬಿನಿಂದ ಸೂಕ್ತವಾದ ಆಕೃತಿಗಳನ್ನು ತೆಗೆದು ಕೆಳಗೆ ಕೊಟ್ಟಿರುವ ಚಿತ್ರಗಳನ್ನು ಮಾಡಿರಿ.











**ಗಣಿತದ ಆಕೃತಿಗಳನ್ನು ರಚಿಸುವ**

ಉಪಯೋಗಿಸಬೇಕಾದ ಸೋಫ್ಟ್‌ವೇರ್ : ಐ.ಟಿ. ಸ್ಕೂಲ್ ಗ್ನು ಲಿನಕ್ಸಿನ ಟಕ್ಸ್ ಪೈಂಟ್ (Tux paint). ಸೋಫ್ಟ್‌ವೇರನ್ನು ತೆರೆಯಲಿರುವ ರೀತಿ

Favorites → Tux Paint






- ಪ್ರತಿಯೊಂದು ಚಿತ್ರದಲ್ಲಿ ಉಪಯೋಗಿಸಿದ ಆಯತಗಳು, ತ್ರಿಕೋನಗಳು, ಉರುಟುಗಳು ಎಷ್ಟೆಂದು ಬರೆದು ನೋಡಿರಿ.

## ತ್ರಿಕೋನವೂ ಆಯತವೂ



ಆಯತಗಳನ್ನೂ ತ್ರಿಕೋನಗಳನ್ನೂ ಜೋಡಿಸಿಟ್ಟು ಅನು ಮತ್ತು ಸಹಪಾಠಿಗಳು ತಯಾರಿಸಿದ ಆಕೃತಿಗಳನ್ನು ನೋಡಿರಿ.





ನಮಗೂ ಇದರಂತೆ ರಚಿಸಬಹುದು.

ತ್ರಿಕೋನಗಳೂ, ಆಯತಗಳೂ ಬೇಕಲ್ಲವೇ.

ಅವುಗಳನ್ನು ಗಣಿತ ಲ್ಯಾಬಿನಿಂದ ತೆಗೆಯುವ.

ಜೋಡಿಸಿಟ್ಟು ವಿವಿಧ ಆಕೃತಿಗಳನ್ನು ರಚಿಸಬಹುದಲ್ಲವೇ.


ಇಷ್ಟವಿರುವ ಬಣ್ಣಗಳನ್ನು ಹಚ್ಚಿ ಅಂದಗೊಳಿಸುವ.


ಪ್ರದರ್ಶಿಸುವ.





ವಿನು ಮತ್ತು ಸಹಪಾಠಿಗಳು ತಯಾರಿಸಿದ ಆಕೃತಿಗಳನ್ನು ನೋಡಿರಿ.


ತ್ರಿಕೋನಗಳನ್ನು ಮತ್ತು ಆಯತಗಳನ್ನು ಜೋಡಿಸಿಟ್ಟು ಹಲವು ಆಕೃತಿಗಳನ್ನು ತಯಾರಿಸಬಹುದು ಹಾಗೂ ರಚಿಸಬಹುದು. ಬಣ್ಣ ಕೊಟ್ಟು ಅಂದಗೊಳಿಸಿರಿ.














### ನಾನು ಜೋಡಿಸಿಟ್ಟಾಗ/ರಚಿಸಿದಾಗ

| | |
|---|---|
| ಮೂಲೆಗಳು ಸೇರಿಕೊಂಡಿವೆ. | |
| ಆಕೃತಿಯ ಬದಿಗಳನ್ನು ಸರಿಯಾಗಿ ಸೇರಿಸಿ ರಚಿಸಲಾಗಿದೆ. | |
| ಜೋಡಿಸಿಡಲು ಒಂದು ಕ್ರಮವನ್ನು ಸ್ವೀಕರಿಸಲಾಗಿದೆ. | |
| ಚಿತ್ರವು ಕಾಣಲು ಸಾಮಾನ್ಯವಾಗಿ ಅಂದವಾಗಿದೆ. | |

## ಉರುಟು ಹಾಕುವ





ಇಷ್ಟವಿರುವ ಬಣ್ಣವನ್ನು ಕೊಟ್ಟು ನೋಡಿರಿ.


## ಹೀಗೂ ಆಕೃತಿಗಳು











ಈ ಎಂಟು ತುಂಡುಗಳನ್ನು ಸೂಕ್ತವಾದ ರೀತಿಯಲ್ಲಿ ಜೋಡಿಸಿಟ್ಟು ಮೇಲೆ ಕೊಟ್ಟಿರುವ ಆಕೃತಿಗಳನ್ನು ರಚಿಸಿ ನೋಡಬಹುದಲ್ಲವೇ? ಇನ್ನಷ್ಟು ಆಕೃತಿಗಳನ್ನು ರಚಿಸಲು ಪ್ರಯತ್ನಿಸಿರಿ.

## ರಚಿಸುವ, ರಚಿಸುವ, ಇನ್ನೂ ರಚಿಸುವ

- ಚುಕ್ಕಿಗಳನ್ನು ಜೋಡಿಸಿ ಚಿತ್ರಗಳನ್ನು ರಚಿಸಿರುವುದನ್ನು ನೋಡಿರಿ
- ಚುಕ್ಕಿಗಳನ್ನು ಜೋಡಿಸಿ ನಿಮಗೆ ಇಷ್ಟವಿರುವ ಚಿತ್ರಗಳನ್ನು ರಚಿಸಿರಿ.






**ಗಣಿತದ ಆಕೃತಿಗಳನ್ನು ಉಪಯೋಗಿಸಿರುವ ರಚನೆಗಳು**


ಉಪಯೋಗಿಸಬೇಕಾದ ಸೋಫ್ಟ್‌ವೇರ್ : ಐ.ಟಿ.@ಸ್ಕೂಲ್ ಜಿಕೋಂಪ್ರಿಸ್

ಸೋಫ್ಟ್‌ವೇರನ್ನು ತೆರೆಯುವ ವಿಧಾನ : ಜಿಕೋಂಪ್ರಿಸ್ ತೆರೆದು, ಕುಣಿಕೆ ಬಿಡಿಸುವುದು → ಗಣಿತ ಆಕೃತಿಗಳನ್ನು ಉಪಯೋಗಿಸಿ ಮಾಡುವ ರಚನೆಗಳು

## ಕಡ್ಡಿಗಳಿಂದ ಮಾಡಿದ ಆಕೃತಿಗಳು










ಬೆಂಕಿಕಡ್ಡಿಗಳಿಂದ ತ್ರಿಕೋನವನ್ನೂ ಆಯತವನ್ನೂ ಮಾಡಬಹುದು.

ಒಂದು ತ್ರಿಕೋನ ಮಾಡಲು ಎಷ್ಟು ಕಡ್ಡಿಗಳು ಬೇಕಾದುವು? ಆಯತವನ್ನು ಮಾಡಲೋ?



ಮಡಲ ಕಡ್ಡಿಗಳನ್ನು ತುಂಡರಿಸಿ ಕೆಳಗೆ ಕೊಟ್ಟಿರುವಂತೆ ತ್ರಿಕೋನಗಳನ್ನೂ ಆಯತಗಳನ್ನೂ ನಿರ್ಮಿಸಿರಿ.




ಮಡಲ ಕಡ್ಡಿಗಳಿಂದ ತಯಾರಿಸಿದ ಈ ಆಕೃತಿಗಳನ್ನು ಒಂದು ಚಾರ್ಟ್ ಪೇಪರಿನಲ್ಲಿ ಅಂದವಾಗಿ ಅಂಟಿಸಿ ಇಡಬಹುದಲ್ಲವೇ?

ಒಂದು ತ್ರಿಕೋನಕ್ಕೆ ಮೂರು ಬದಿಗಳಿವೆ.

ಆಯತಕ್ಕೋ? ____


ಮಡಲ ಕಡ್ಡಿಗಳಿಂದ ಮಾಡಿದ ಮನೆಯನ್ನು ನೋಡಿದಿರಾ?




## ಆಯತ ಪೆಟ್ಟಿಗೆ

ಆಯತ ಗಟ್ಟಿಯ ಆಕೃತಿಯಲ್ಲಿರುವ ವಸ್ತುಗಳನ್ನು ಬರೆಯಿರಿ.

- ಇಟ್ಟಿಗೆ
- ಬೆಂಕಿಪೆಟ್ಟಿಗೆ
- 
- 
- 






ಆಯತ ಗಟ್ಟಿಯ ಪ್ರತಿಯೊಂದು ಮುಖವನ್ನು ನೋಡಿರಿ.


ಎಲ್ಲವೂ ಆಯತಗಳಾಗಿವೆಯಲ್ಲವೇ?

ಎಷ್ಟು ಮುಖಗಳಿವೆ? [ ]

**ಮುಂದಿನ ಚಿತ್ರಗಳನ್ನು ರಚಿಸಿರಿ.**



## ಟೊಪ್ಪಿಯೂ ದೋಣಿಯೂ




ಇಂತಹ ಮಾದರಿಗಳನ್ನು ನಿಮಗೂ ಮಾಡಬಹುದಲ್ಲವೇ? ಇದರಂತೆ ಕಾಗದವನ್ನು ಮಡಚಿ ಬೇರೆ ಯಾವೆಲ್ಲ ಆಟಿಕೆಗಳನ್ನು ನಿರ್ಮಿಸಲು ನಿಮಗೆ ತಿಳಿದಿದೆ?

ಸಹಪಾಠಿಗಳಿಗೆ ಹೇಳಿ ಕೊಡಲು ಮರೆಯಬೇಡಿ.

ಪ್ರತಿ ಸಲ ಕಾಗದವನ್ನು ಮಡಚುವಾಗ ಯಾವೆಲ್ಲ ಆಕೃತಿಗಳು ಉಂಟಾಗುವುವೆಂದು ಗಮನಿಸುವಿರಲ್ಲವೇ?

# 5

# ಸಮಾನರು ಒಟ್ಟಾಗುವಾಗ

## ಪ್ರವೇಶೋತ್ಸವ

ಹೊಸ ಗೆಳೆಯರು ಬಂದರು. ಎಲ್ಲರಿಗೂ ಮಿಠಾಯಿ ಕೊಡಬೇಕು.




ನನ್ನ ಬೆಂಚಿನಲ್ಲಿರುವ ಎಲ್ಲರಿಗೂ 2 ರಂತೆ ಮಿಠಾಯಿ ಸಿಕ್ಕಿತು.

ನಾವು 5 ಮಂದಿ ಇದ್ದೇವೆ.

ಎಷ್ಟು ಮಿಠಾಯಿ?

$2 + 2 + 2 + 2 + 2 = 10$

ಐದು 2 ಗಳು ಸೇರಿರುವುದು 10

ಇದನ್ನು $5 \times 2$ ಎಂದು ಸಂಕ್ಷೇಪಿಸಿ ಬರೆಯಬಹುದು.


ಅಂದರೆ, $5 \times 2 = 10$

ಗುಂಪಿಗೆ ಇನ್ನೊಬ್ಬ ಬಂದರೆ ಒಟ್ಟು ಎಷ್ಟು ಮಿಠಾಯಿಗಳು ಬೇಕು?

ಇದನ್ನು ಸಂಕ್ಷೇಪಿಸಿ ಹೇಗೆ ಬರೆಯಬಹುದು?

.................. × .................. = ..................

## ಆಟದ ಗಾಡಿ



ತರಗತಿಯಲ್ಲಿ ಆಟದ ಗಾಡಿಯನ್ನು ನಿರ್ಮಿಸುತ್ತಿದ್ದಾರೆ.
ರಾಜು ಕೂಡಾ ಆಟದ ಗಾಡಿಯನ್ನು ಮಾಡಿದನು.
ಒಂದು ಗಾಡಿಗೆ ಮೂರು ಚಕ್ರಗಳು.
ಚಕ್ರಗಳಿಗೆ ಕುಪ್ಪಿಯ ಮುಚ್ಚಳಗಳು.
ರಾಜುವಿಗೆ 4 ಗಾಡಿಗಳನ್ನು ತಯಾರಿಸಬೇಕು.
ಎಷ್ಟು ಮುಚ್ಚಳಗಳು ಬೇಕು?

$3 + 3 + 3 + 3 = 12$

ನಾಲ್ಕು 3 ಗಳು ಸೇರಿದರೆ 12.

ಅಂದರೆ, $4 \times 3 = 12$.

ಅಬು 2 ಗಾಡಿಗಳನ್ನು ನಿರ್ಮಿಸಿದನು.

ಅಬುವಿಗೆ ಎಷ್ಟು ಮುಚ್ಚಳಗಳು ಬೇಕಾದುವು? [ ]

ಇಬ್ಬರಿಗೂ ಸೇರಿ ಎಷ್ಟು ಮುಚ್ಚಳಗಳು ಬೇಕು? [ ]

$3 + 3 + 3 + 3 + 3 + 3 = 18$



ಇದನ್ನು ಸಂಕ್ಷೇಪಿಸಿ ಹೇಗೆ ಬರೆಯಬಹುದು?

....... × ....... = .............

## ಗುಂಪುಗಳಾಗುವ

ಗಣಿತ ಲ್ಯಾಬಿನ ಚಟುವಟಿಕೆಗಳನ್ನು ಮಾಡಲು ಟೀಚರು ಮಕ್ಕಳನ್ನು ಗುಂಪುಗಳಾಗಿ ಮಾಡಿದರು.


ಒಂದು ಗುಂಪಿನಲ್ಲಿ 4 ಮಕ್ಕಳಂತೆ 6 ಗುಂಪುಗಳು.
ಒಟ್ಟು ಮಕ್ಕಳ ಸಂಖ್ಯೆ ಎಷ್ಟು?

$4 + 4 + 4 + 4 + 4 + 4$ = .............

$6 \times 4$ = .............

## ಹೂಗಳೆಷ್ಟು?

ಗಣಿತ ಲ್ಯಾಬಿಗೆ ತಲುಪಿದ ಮಕ್ಕಳು ಹೂಗಳನ್ನು ಸಾಲಾಗಿ ಇರಿಸಿದರು.



ಒಂದು ಸಾಲಿನಲ್ಲಿ ಎಷ್ಟು ಹೂಗಳಿವೆ? [ ]

ಎಷ್ಟು ಸಾಲುಗಳು? [ ]

ಒಟ್ಟು ಎಷ್ಟು ಹೂಗಳು? [ ]

6 + ....... + ....... = .............

......... × 6 = .............

## ನಮೂನೆಗಳನ್ನು ಪೂರ್ತಿಗೊಳಿಸುವ

- 2, 4, 6, ........, ........, ........
- 3, 6, 9, ........, ........, ........
- 4, 8, 12, ........, ........, ........
- 5, 10, 15, ........, ........, ........
- 6, 12, 18, ........, ........, ........

## ಕೂಡಿಸುವುದು ಮತ್ತು ಗುಣಿಸುವುದು

ಪಟ್ಟಿಯಲ್ಲಿ ಬಿಟ್ಟು ಹೋದ ಕೋಣೆಗಳನ್ನು ಪೂರ್ತಿಗೊಳಿಸುವ.

| | | |
|---|---|---|
| | ಮೂರು 4 ಗಳು ಸೇರಿದರೆ 12 | 3 × 4 = 12 |
| | | 4 × 3 = 12 |
| 6 + 6 = 12 | | |
| | ಆರು 2 ಗಳು ಸೇರಿದರೆ 12 | |


## ಕಂಡುಹಿಡಿಯಿರಿ

| | |
|---|---|
| ಒಂದು ಪೆನ್ಸಿಲಿಗೆ 2 ರೂಪಾಯಿ. 10 ಪೆನ್ಸಿಲುಗಳ ಬೆಲೆ ಎಷ್ಟು? | 10 × 2 = 20 |
| ಒಂದು ಪ್ಯಾಕೆಟಿನಲ್ಲಿ 6 ಮೇಣದ ಬತ್ತಿಗಳಿವೆ. ಅಂತಹ 4 ಪ್ಯಾಕೆಟ್‌ಗಳಲ್ಲಿ ಎಷ್ಟು ಮೇಣದ ಬತ್ತಿಗಳಿರಬಹುದು? | 4 × 6 = .......... |
| ಸಮವಸ್ತ್ರಕ್ಕಾಗಿ ಒಂದು ಮಗುವಿಗೆ 3 ಮೀಟರ್ ಬಟ್ಟೆ ಬೇಕು. 5 ಮಕ್ಕಳಿಗೆ ಎಷ್ಟು ಮೀಟರ್ ಬಟ್ಟೆ ಬೇಕು? | .......... = .......... |
| 5 ರೂಪಾಯಿ ಬೆಲೆಯಿರುವ 5 ನೋಟು ಪುಸ್ತಕಗಳನ್ನು ಖರೀದಿಸಲು ಎಷ್ಟು ರೂಪಾಯಿ ಬೇಕು? | .......... = .......... |
| ................................................................................ | 3 × 4 = .............. |
| ಒಂದು ಪೆನ್ನಿನ ಬೆಲೆ 6 ರೂಪಾಯಿ. 6 ಪೆನ್ನುಗಳ ಬೆಲೆ ಎಷ್ಟು? | .......... = .......... |

## ಮಾಡಿ ನೋಡಿರಿ



- ರಾಮುವಿನ ಬಾಳೆ ತೋಟದಲ್ಲಿ ಒಂದು ಸಾಲಿನಲ್ಲಿ ಮೂರು ಬಾಳೆಗಿಡಗಳಿವೆ. ಆರು ಸಾಲುಗಳಲ್ಲಿ ಎಷ್ಟು ಬಾಳೆಗಿಡಗಳಿವೆ?




- ಒಂದು ಮೇಜಿನ ಸುತ್ತಲೂ 4 ಕುರ್ಚಿಗಳನ್ನು ಇರಿಸಬಹುದು. ಇದರಂತೆ ನಾಲ್ಕು ಮೇಜುಗಳ ಸುತ್ತಲೂ ಒಟ್ಟು ಎಷ್ಟು ಕುರ್ಚಿಗಳನ್ನು ಇರಿಸಬಹುದು?



- ಶಾಲೆಯ ಮಕ್ಕಳಿಗೆ ಹಾಲು ವಿತರಿಸಲು ಗ್ಲಾಸುಗಳನ್ನು ಖರೀದಿಸಲಾಯಿತು. ಆರು ಗ್ಲಾಸುಗಳನ್ನೊಳಗೊಂಡ 5 ಪೆಟ್ಟಿಗೆಗಳನ್ನು ಖರೀದಿಸಿದರು. ಹಾಗಾದರೆ ಒಟ್ಟು ಗ್ಲಾಸುಗಳ ಸಂಖ್ಯೆ ಎಷ್ಟು?

## ಕ್ರಮ ಬದಲಾದರೆ

ಕ್ರೀಡಾ ಕೂಟದಲ್ಲಿ ಭಾಗವಹಿಸುವ ಮಕ್ಕಳಿಗೆ ಅಧ್ಯಾಪಕರು ಮೈದಾನದಲ್ಲಿ ತರಬೇತಿ ನೀಡುತ್ತಿರುವರು.




ಒಟ್ಟು ಎಷ್ಟು ಮಕ್ಕಳು?
ನಾಲ್ಕು 5 ಗಳು

$5 + 5 + 5 + 5 =$ ...........

$4 \times 5 =$ ...........

ಐದು 4 ಗಳಾದರೋ

$4 + 4 + 4 + 4 + 4 =$ ...........


$5 \times 4 =$ ...........

ಅಂದರೆ, $4 \times 5 = 5 \times 4$

### ಪುನಃ ಒಂದು ಸಂಖ್ಯಾ ಆಟವಾಗಬಹುದು...

7 ಕ್ಕಿಂತ ಚಿಕ್ಕದಾದ ಒಂದು ಒಂದಂಕೆ ಸಂಖ್ಯೆಯನ್ನು ಊಹಿಸಿರಿ, ಸಂಖ್ಯೆಯನ್ನು 3 ರಿಂದ ಗುಣಿಸಿರಿ. ಸಿಕ್ಕಿದ ಸಂಖ್ಯೆಯಿಂದ 1 ನ್ನು ಕಳೆಯಿರಿ.
ಪುನಃ 1ನ್ನು ಕಳೆಯಿರಿ. 3 ಸಂಖ್ಯೆಗಳನ್ನು ಕೂಡಿಸಿರಿ. ಸಿಗುವ ಉತ್ತರದ ಅಂಕೆಗಳನ್ನೆಲ್ಲ ಕೂಡಿಸಿರಿ. ಎಷ್ಟು ಸಿಕ್ಕಿತು? ಇತರ ಸಂಖ್ಯೆಗಳನ್ನು ಊಹಿಸಿ ಇದೇ ಕ್ರಿಯೆಗಳನ್ನು ಮಾಡಬಹುದಲ್ಲವೆ. ಉತ್ತರದಲ್ಲಿರುವ ಸ್ವಾರಸ್ಯ ಏನೆಂದು ಕಂಡುಹಿಡಿಯಿರಿ.

## ಬೊಟ್ಟುಗಳು ಎಷ್ಟು?



ಎಷ್ಟು ಅಡ್ಡ ಸಾಲುಗಳು? ☐

ಒಂದು ಅಡ್ಡ ಸಾಲಿನಲ್ಲಿ ಎಷ್ಟು ಬೊಟ್ಟುಗಳಿವೆ? ☐

ಒಟ್ಟು ಬೊಟ್ಟುಗಳು ಎಷ್ಟು?

6 + 6 + 6 + 6 + 6 = ...........

ನೀಟ ಸಾಲುಗಳನ್ನು ಲೆಕ್ಕ ಹಾಕಿದರೋ?

5 + 5 + 5 + 5 + 5 + 5 = ...........

ಅಂದರೆ,

$5 \times 6 = 6 \times 5$

$5 \times 6 = ..... \times ..... = ......$

### ಕೂಡಿಸಿದರೂ, ಗುಣಿಸಿದರೂ

3 ಅಂಕೆಗಳನ್ನು ಪರಸ್ಪರ ಗುಣಿಸಿದರೂ ಕೂಡಿಸಿದರೂ ಒಂದೇ ಉತ್ತರ ಲಭಿಸುವುದು. ಅಂಕೆಗಳು ಯಾವುವು?

### ಪೂರ್ತಿಗೊಳಿಸಿರಿ

$5 \times 4 = 4 \times 5$

$3 \times 2 = 2 \times 3$

$4 \times 3 = ... \times ...$

$... \times ... = ... \times ...$



### ಗುಣಲಬ್ಧವನ್ನು ಕಂಡುಹಿಡಿಯುವ

ಉಪಯೋಗಿಸಬೇಕಾದ ಸೋಫ್ಟ್‌ವೇರ್ :

ಐ.ಟಿ. @ ಸ್ಕೂಲ್ ಗ್ನು–ಲಿನಕ್ಸಿನ ಜಿಕೋಂಪ್ರಿಸ್.

ಸೋಫ್ಟ್‌ವೇರನ್ನು ತೆರೆಯಲಿರುವ ದಾರಿ : ಜಿಕೋಂಪ್ರಿಸ್ ತೆರೆದು

ಗಣಿತ → ಗಣಿತ ಲೆಕ್ಕಾಚಾರಗಳೆಡೆಗೆ

ಹೋಗುವ → ಗಣಿತದ ಆಟಗಳು

→ ಗುಣಾಕಾರ

## ವಿವಿಧ ರೀತಿಗಳು

12 ನ್ನು ವಿವಿಧ ಗುಂಪುಗಳಾಗಿ ಬರೆದಿರುವುದನ್ನು ನೋಡಿರಿ.

**12**

- $2 \times 6$
- $3 \times 4$
- $4 \times 3$
- $6 \times 2$

ಸಜು 10 ರೂಪಾಯಿ ಬೆಲೆಯ 5 ಪೆನ್ನುಗಳನ್ನು ಖರೀದಿಸಿದನು. ಹಾಗಾದರೆ 5 ರೂಪಾಯಿಯ ಎಷ್ಟು ನೋಟುಗಳನ್ನು ಸಜು ಅಂಗಡಿಯವನಿಗೆ ನೀಡಬೇಕು?

ಇದರಂತೆ 20ನ್ನು ವಿವಿಧ ರೀತಿಗಳಲ್ಲಿ ಬರೆಯಬಹುದೇ?

### ಅಪ್ಪುವಿನ ಮ್ಯಾಜಿಕ್

ಮನಸ್ಸಿನಲ್ಲಿ ಒಂದಂಕೆ ಸಂಖ್ಯೆಯನ್ನು ಊಹಿಸಿರಿ. 2 ರಿಂದ ಗುಣಿಸಿರಿ. ಪುನಃ 5 ರಿಂದ ಗುಣಿಸಿರಿ. 10ನ್ನು ಕೂಡಿಸಿರಿ. ಉತ್ತರವನ್ನು ಹೇಳಿರಿ. ನೀವು ಊಹಿಸಿದ ಸಂಖ್ಯೆಯನ್ನು ನಾನು ಹೇಳುವೆನು. ಅಪ್ಪುವಿನ ಮ್ಯಾಜಿಕ್ ಅರ್ಥವಾಯಿತೇ?

### ಕಂಪ್ಯೂಟರ್ ಗಣಿತ




ಉಪಯೋಗಿಸಬೇಕಾದ ಸೋಫ್ಟ್‌ವೇರ್ : ಐ.ಟಿ.@ಸ್ಕೂಲ್ ಗ್ನು–ಲಿನಕ್ಸಿನ ಜಿಕೋಂಪ್ರಿಸ್.

ಸೋಫ್ಟ್‌ವೇರ್ ತೆರೆಯಲಿರುವ ದಾರಿ : ಜಿಕೋಂಪ್ರಿಸ್ ತೆರೆದು

ಗಣಿತ → ಗಣಿತ ಲೆಕ್ಕಾಚಾರಗಳ ಕಡೆಗೆ ಹೋಗುವ → ಗಣಿತ ಲೆಕ್ಕಾಚಾರಗಳ ಕಡೆಗೆ → ಗುಣಕಗಳನ್ನು ಕಾಣುವ.

ಎಂಟು ಇಟ್ಟಿಗೆಗಳನ್ನು ಯಾವೆಲ್ಲ ರೀತಿಯಲ್ಲಿ ಹೊಂದಿಸಿ ಇಡಬಹುದು?



## ಕೋಣೆಗಳನ್ನು ಪೂರ್ತಿಗೊಳಿಸುವ

ಬಣ್ಣ ನೀಡದ ಕೋಣೆಗಳಲ್ಲಿರುವ ಸಂಖ್ಯೆಗಳ ವಿಶೇಷತೆ ಏನು?
ಇನ್ನು ಖಾಲಿಯಿರುವ ಕೋಣೆಗಳನ್ನು ಪೂರ್ತಿಗೊಳಿಸಬಹುದು.
ಕೋಣೆಗಳಿಂದ ನಮೂನೆಗಳನ್ನು ಕಂಡುಹಿಡಿದು ಬರೆಯಬಹುದೇ?

| × | 1 | 2 | 3 | 4 | 5 | 6 |
|---|---|---|---|---|---|---|
| 1 | 1 | | | | | |
| 2 | | 4 | | | | |
| 3 | | | 9 | | | |
| 4 | | | | 16 | | |
| 5 | | | | | 25 | |
| 6 | | | | | | 36 |

ಬಣ್ಣ ನೀಡಿರುವ ಕೋಣೆಗಳಲ್ಲಿ ಸಂಖ್ಯೆಗಳನ್ನು ಬರೆಯಿರಿ.
ಈ ಕೋಣೆಗಳಲ್ಲಿ ಸಾಲಾಗಿ ಬರುವ ಸಂಖ್ಯೆಗಳ ಮೊತ್ತ ಕಂಡುಹಿಡಿಯಿರಿ. ವಿಶೇಷತೆ ಏನು?
ಇದರಂತೆ ಇತರ ಕೋಣೆಗಳಲ್ಲಿಯೂ ಸಂಖ್ಯೆಗಳನ್ನು ತುಂಬಿಸಿ ಮೊತ್ತ ಕಂಡುಹಿಡಿದು ನೋಡಿರಿ.

| × | 1 | 2 | 3 | 4 | 5 | 6 |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |
| 6 | | | | | | |



### ಕಂಡುಹಿಡಿಯುವ

ಉಪಯೋಗಿಸಬೇಕಾದ ಸೋಫ್ಟ್‌ವೇರ್ : ಐ.ಟಿ.@ ಸ್ಕೂಲ್ ಗ್ನು–ಲಿನಕ್ಸಿನ ಜಿಕೋಂಪ್ರಿಸ್.
ಸೋಫ್ಟ್‌ವೇರನ್ನು ತೆರೆಯಲಿರುವ ದಾರಿ : ಜಿಕೋಂಪ್ರಿಸ್ ತೆರೆದು
ಗಣಿತ → ಗಣಿತ ಲೆಕ್ಕಾಚಾರಗಳ ಕಡೆಗೆ ಹೋಗುವ → ನೆನಪು ಶಕ್ತಿ
ಉಪಯೋಗಿಸಿರುವ ಗಣಿತದ ಆಟಗಳು → ಗುಣಾಕಾರ

## ಕೋಣೆಗಳನ್ನು ಪೂರ್ತಿಗೊಳಿಸುವ

ಕೋಣೆಗಳಿಂದ 3 ರ ಗುಂಪುಗಳನ್ನು ಬರೆದು ನೋಡಿರಿ.

$1 \times 3 = 3$

$2 \times 3 = 6$

$3 \times 3 =$ ..........

.......... = ..........

.......... = ..........

$6 \times 3 =$ ..........

4 ರ ಮತ್ತು 6 ರ ಗುಂಪುಗಳನ್ನು ಇದರಂತೆ ಬರೆಯಬಹುದು.

| | | | | | |
|---|---|---|---|---|---|
| $1 \times 4$ | = | ....... | ........... | = | ....... |
| ........... | = | ....... | ........... | = | ....... |
| ........... | = | ....... | ........... | = | ....... |
| ........... | = | ....... | ........... | = | ....... |
| $6 \times 4$ | = | ....... | $6 \times 6$ | = | ....... |

## ದಾರಿ ಕಂಡುಹಿಡಿಯುವ

ಕೆಳಗೆ ನೀಡಿರುವ ಗುಣಾಕಾರ ಕ್ರಿಯೆಗಳಲ್ಲಿ ಉತ್ತರವಾಗಿ ಬರುವ ಸಂಖ್ಯೆಗಳಿರುವ ಕೋಣೆಗಳ ಮೂಲಕ ಸಾಗಿ ಕೋಳಿಯನ್ನು ಅದರ ಗೂಡಿಗೆ ತಲುಪಿಸಬಹುದೇ.

| | | |
|---|---|---|
| $5 \times 5$ | $3 \times 2$ | $5 \times 3$ |
| $6 \times 6$ | $4 \times 3$ | $5 \times 2$ |
| $2 \times 2$ | $6 \times 3$ | $6 \times 5$ |
| $3 \times 3$ | $6 \times 2$ | $5 \times 4$ |
| $4 \times 4$ | $4 \times 2$ | $6 \times 4$ |




| | | | | |
|---|---|---|---|---|
| 25 | 36 | 17 | 14 | 11 |
| 5 | 4 | 9 | 16 | 6 |
| 21 | 31 | 13 | 22 | 12 |
| 33 | 15 | 8 | 12 | 18 |
| 24 | 10 | 30 | 20 | 24 |



## ಶಾಲಾ ಸೊಸೈಟಿ

ಶಾಲಾ ಸೊಸೈಟಿಯ ಬೆಲೆ ವಿವರ ಪಟ್ಟಿಯನ್ನು ನೋಡಿರಿ.




- ಮನು 4 ನೋಟುಪುಸ್ತಕಗಳನ್ನೂ 4 ಪೆನ್ನುಗಳನ್ನೂ ಖರೀದಿಸಿದನು. ಒಟ್ಟು ಎಷ್ಟು ರೂಪಾಯಿಯಾಯಿತು?
- ಮಾಯಾ 5 ಪೆನ್ಸಿಲುಗಳನ್ನೂ 2 ಕಟ್ಟರುಗಳನ್ನೂ ಖರೀದಿಸಿದಳು. ಒಟ್ಟು ಎಷ್ಟು ರೂಪಾಯಿಯಾಯಿತು?
- ರಹೀಂ 3 ಪೆನ್ಸಿಲುಗಳನ್ನೂ 2 ರಬ್ಬರುಗಳನ್ನೂ ಖರೀದಿಸಿದನು. ಒಟ್ಟು ಎಷ್ಟು ರೂಪಾಯಿಯಾಯಿತು?
- ಡೆನ್ನೀಸ್ 2 ನೋಟು ಪುಸ್ತಕಗಳನ್ನೂ 3 ಸ್ಕೇಲುಗಳನ್ನೂ ಖರೀದಿಸಿದನು. ಎಷ್ಟು ರೂಪಾಯಿಯಾಯಿತು?
- ಸೆಫಿಯ ಕೈಯಲ್ಲಿ 24 ರೂಪಾಯಿ ಇದೆ. ಈ ಹಣದಿಂದ ಸೆಫಿಗೆ ಯಾವೆಲ್ಲಾ ವಸ್ತುಗಳನ್ನು ಎಷ್ಟೆಷ್ಟು ಖರೀದಿಸಬಹುದು?
- ಜಮೀಲ ಟೀಚರು ಪಟ್ಟಿಯಲ್ಲಿರುವ ಎಲ್ಲಾ ವಸ್ತುಗಳನ್ನು 4 ರಂತೆ ಖರೀದಿಸಿದರು. ಟೀಚರು ಎಷ್ಟು ಹಣವನ್ನು ನೀಡಬೇಕು?

ಪಟ್ಟಿಯನ್ನು ಆಧಾರವಾಗಿಸಿ ಸಹಪಾಠಿಗಳಲ್ಲಿ ಕೇಳಲು ಪ್ರಶ್ನೆಗಳನ್ನು ತಯಾರಿಸಿರಿ.

**ನಾನು ಕಂಡುಕೊಂಡದ್ದು**







## ಫುಟ್ಬಾಲ್ ಸ್ಪರ್ಧೆ

ಫುಟ್ಬಾಲ್ ಸ್ಪರ್ಧೆಯನ್ನು ನೋಡಲು ಗೆಳೆಯರೆಲ್ಲ ಹೊರಟರು. 4 ಕಾರುಗಳಲ್ಲಿಯೂ 3 ಆಟೋ ರಿಕ್ಷಾಗಳಲ್ಲಿಯೂ ಅವರು ಹೋದರು. ಒಂದು ಕಾರಿನಲ್ಲಿ 5 ಮಂದಿಯಂತೆಯೂ ಆಟೋ ರಿಕ್ಷಾದಲ್ಲಿ 3 ಮಂದಿಯಂತೆಯೂ ಪ್ರಯಾಣ ಮಾಡಿದರು. ಸ್ಪರ್ಧೆಯನ್ನು ನೋಡಲು ಹೋದವರು ಎಷ್ಟು ಮಂದಿ?

## ಗಾಡಿಗಳು ಎಷ್ಟು?



ಅಪ್ಪು ಆಟದ ಗಾಡಿಗಳನ್ನು ತಯಾರಿಸುತ್ತಿದ್ದಾನೆ. ಚಕ್ರಗಳೋ.... ಕುಪ್ಪಿಗಳ ಮುಚ್ಚಳಗಳು. ಎರಡು ಚಕ್ರದ ಗಾಡಿಗಳಿವೆ, ಮೂರು ಚಕ್ರದ ಗಾಡಿಗಳಿವೆ, ನಾಲ್ಕು ಚಕ್ರದ ಗಾಡಿಗಳು ಇವೆ. ಅಷ್ಟರಲ್ಲಿ ಅವನು ತಂದ 30 ಮುಚ್ಚಳಗಳು ಮುಗಿದವು. ಅಪ್ಪು ಮಾಡಿದ ಎರಡು ಚಕ್ರದ ಗಾಡಿಗಳೆಷ್ಟು? ಮೂರು ಚಕ್ರದ ಗಾಡಿಗಳೆಷ್ಟು?

4 ಚಕ್ರದ ಗಾಡಿಗಳೆಷ್ಟು?

## ಸ್ಕೂಲ್ ಬಸ್ಸು



ಸ್ಕೂಲ್ ಬಸ್ಸಿನಲ್ಲಿ ಎಷ್ಟು ಜನರಿದ್ದಾರೆಂದು ಸಾಬು ಲೆಕ್ಕ ಹಾಕಿದನು. "ಬಲಬದಿಯಲ್ಲಿ 3 ಜನರಂತೆ ಕುಳಿತುಕೊಳ್ಳುವ 6 ಸೀಟುಗಳು. ಎಡಬದಿಯಲ್ಲಿ 2 ಜನರಂತೆ ಕುಳಿತುಕೊಳ್ಳುವ 5 ಸೀಟುಗಳು. ನಾನು ಸೇರಿ 4 ಜನರಿಗೆ ಸೀಟು ಸಿಗದೆ ನಿಂತಿದ್ದೇವೆ." ಹಾಗಾದರೆ ಬಸ್ಸಿನಲ್ಲಿ ಇರುವವರ ಸಂಖ್ಯೆ ಎಷ್ಟು?

ಹತ್ತಿರದ ಬಸ್ಸು ತಂಗುದಾಣದಲ್ಲಿ ಬಸ್ಸು ನಿಂತಾಗ 3 ಜನರಂತೆ ಕುಳಿತುಕೊಳ್ಳುವ 2 ಸೀಟುಗಳಿಂದ, 2 ಜನರಂತೆ ಕುಳಿತುಕೊಳ್ಳುವ 3 ಸೀಟುಗಳಿಂದ ಮಕ್ಕಳು ಇಳಿದರು. ಈಗ ಎಷ್ಟು ಮಂದಿ ಬಸ್ಸಿನಲ್ಲಿದ್ದಾರೆ?



ಒಂದು ಪ್ಯಾಕೆಟಿನಲ್ಲಿ 3 ರಂತೆ ಬಿಸ್ಕೇಟುಗಳಿರುವ 6 ಪ್ಯಾಕೆಟ್ ಬಿಸ್ಕೇಟುಗಳನ್ನು ಕೊಂಡುಕೊಳ್ಳಲಾಯಿತು. ಹಾಗಾದರೆ ಒಟ್ಟು ಬಿಸ್ಕೇಟ್‌ಗಳೆಷ್ಟು?

ಟೀಚರು ಮಕ್ಕಳನ್ನು 4 ಮಂದಿಯ 5 ಗುಂಪುಗಳನ್ನಾಗಿ ಮಾಡಿದಾಗ ಒಬ್ಬನು ಬಾಕಿಯಾದನು. 5 ಮಕ್ಕಳಂತೆ ಇರುವ 4 ಗುಂಪುಗಳನ್ನು ಮಾಡಿದಾಗ ಒಬ್ಬನು ಬಾಕಿಯಾದನು. ಹಾಗಾದರೆ ಮಕ್ಕಳ ಸಂಖ್ಯೆ ಎಷ್ಟು?

5 ಬೆಂಚಿನಲ್ಲಿ 5 ಮಕ್ಕಳಂತೆ ಕುಳಿತುಕೊಂಡಾಗ 5 ಮಂದಿ ಬಾಕಿಯಾದರು. ಹಾಗಾದರೆ ಒಟ್ಟು ಮಕ್ಕಳ ಸಂಖ್ಯೆ ಎಷ್ಟು? 5 ಮಂದಿಯಂತೆ ಎಲ್ಲರೂ ಕುಳಿತುಕೊಳ್ಳಬೇಕಾದರೆ ಎಷ್ಟು ಬೆಂಚುಗಳು ಬೇಕು?

ರಾಜಿ 100 ರೂಪಾಯಿಯನ್ನು ತೆಗೆದುಕೊಂಡು ಅಂಗಡಿಗೆ ಹೋದಳು. 6 ರೂಪಾಯಿ ಬೆಲೆಯುಳ್ಳ 4 ನೋಟು ಪುಸ್ತಕಗಳನ್ನೂ 3 ರೂಪಾಯಿ ಬೆಲೆಯುಳ್ಳ 6 ಪೆನ್ನುಗಳನ್ನೂ ಪಡೆದುಕೊಂಡಳು. ತಮ್ಮನಿಗಾಗಿ 2 ರೂಪಾಯಿ ಬೆಲೆಯ 6 ಪೆನ್ಸಿಲುಗಳನ್ನು ಮತ್ತು 5 ರೂಪಾಯಿ ಬೆಲೆಯ 4 ನೋಟು ಪುಸ್ತಕಗಳನ್ನು ಪಡೆದುಕೊಂಡಳು. ಅವಳಿಗೆ ಸಿಕ್ಕಿದ ಬಾಕಿ ಹಣವೆಷ್ಟು?

## ಕಲ್ಲುಗುಡ್ಡೆ ಯು.ಪಿ. ಶಾಲೆ

ಕಲ್ಲುಗುಡ್ಡೆ ಯು.ಪಿ. ಶಾಲೆಯಲ್ಲಿ ಒಂದನೇ ತರಗತಿಯಲ್ಲಿ 201 ಮಕ್ಕಳಿದ್ದಾರೆ. 2 ನೇ ತರಗತಿಯಲ್ಲಿ ಅದಕ್ಕಿಂತ 14 ಮಕ್ಕಳು ಕಡಿಮೆ. ಮೂರನೇ ತರಗತಿಯಲ್ಲಿ 186 ಮಕ್ಕಳಿದ್ದಾರೆ. ನಾಲ್ಕನೇ ತರಗತಿಯಲ್ಲಿ ಮೂರನೇ ತರಗತಿಗಿಂತ 18 ಮಕ್ಕಳು ಹೆಚ್ಚು ಇದ್ದಾರೆ.

ಐದನೇ ತರಗತಿಯಲ್ಲಿ 195 ಮಕ್ಕಳು ಕಲಿಯುತ್ತಿದ್ದಾರೆ. ಅತಿ ಹೆಚ್ಚು ಮಕ್ಕಳು ಯಾವ ತರಗತಿಯಲ್ಲಿ ಕಲಿಯುತ್ತಿದ್ದಾರೆ? ಎಲ್.ಪಿ. ವಿಭಾಗದಲ್ಲಿ ಒಟ್ಟು ಎಷ್ಟು ಮಕ್ಕಳು ಕಲಿಯುತ್ತಿದ್ದಾರೆ?

ಈ ವಿವರಗಳನ್ನು ಪಟ್ಟಿ ಮಾಡಿ ನೋಡಿರಿ.

ಕಲ್ಲುಗುಡ್ಡೆ ಯು.ಪಿ. ಶಾಲೆಯ ಆರನೇ ತರಗತಿಯಲ್ಲಿ 213 ಮಕ್ಕಳಿದ್ದಾರೆ. ಅದರಲ್ಲಿ 114 ಮಂದಿ ಹುಡುಗಿಯರು. ಏಳನೇ ತರಗತಿಯಲ್ಲಿ ಆರನೇ ತರಗತಿಯ ಮಕ್ಕಳ ಸಂಖ್ಯೆಗಿಂತ 19 ಮಕ್ಕಳು ಹೆಚ್ಚು.

ಅಲ್ಲಿ ಹುಡುಗರ ಮತ್ತು ಹುಡುಗಿಯರ ಸಂಖ್ಯೆ ಸಮಾನವಾಗಿದೆ. ಎಂಟನೇ ತರಗತಿಯಲ್ಲಿ ಏಳನೇ ತರಗತಿಯಲ್ಲಿರುವ ಮಕ್ಕಳ ಸಂಖ್ಯೆಗಿಂತ 37 ಮಕ್ಕಳು ಕಡಿಮೆ. ಅವರಲ್ಲಿ 105 ಮಂದಿ ಹುಡುಗರು. ಯು.ಪಿ. ವಿಭಾಗದಲ್ಲಿ ಹೆಚ್ಚಿರುವುದು ಹುಡುಗರೋ? ಹುಡುಗಿಯರೋ? ಎಷ್ಟು ಹೆಚ್ಚು?

ಯು.ಪಿ. ವಿಭಾಗದಲ್ಲಿ ಇರುವ ಒಟ್ಟು ಮಕ್ಕಳ ಸಂಖ್ಯೆ ಎಷ್ಟು?

ಈ ವಿವರಗಳನ್ನು ಪಟ್ಟಿ ಮಾಡಿದರೋ?

ಪಟ್ಟಿಯನ್ನು ಆಧಾರವಾಗಿಸಿ ಗೆಳೆಯನಲ್ಲಿ ಕೇಳಲು ಪ್ರಶ್ನೆಗಳನ್ನು ತಯಾರಿಸಿರಿ.

# 6

# ಸಮಯ ಮತ್ತು ಕಾಲ



## ಅಜಿತನ ಒಂದು ದಿನ


ಅಜಿತನು ಬೆಳಗ್ಗೆ ಏಳುತ್ತಾನೆ. — **6** ಗಂಟೆ




ಸ್ನಾನ ಮಾಡುತ್ತಾನೆ. — **7** ಗಂಟೆ




ಶಾಲೆಗೆ ಹೋಗುತ್ತಾನೆ. — **9** ಗಂಟೆ




ತರಗತಿ ಆರಂಭವಾಗುತ್ತದೆ. — **10** ಗಂಟೆ




ಮಧ್ಯಾಹ್ನದ ಊಟ ಮಾಡುತ್ತಾನೆ. — **1** ಗಂಟೆ





ಶಾಲೆ ಬಿಡುತ್ತದೆ. — **4** ಗಂಟೆ




ಮನೆಯಲ್ಲಿ ಕುಳಿತು ಓದುತ್ತಾನೆ. — ರಾತ್ರಿ **7** ಗಂಟೆ




ನಿದ್ದೆ ಮಾಡುತ್ತಾನೆ. — ರಾತ್ರಿ **9** ಗಂಟೆ







- ಒಂದು ದಿನದಲ್ಲಿ ನೀವು ಯಾವ ಯಾವ ಚಟುವಟಿಕೆಗಳನ್ನು ಮಾಡುತ್ತೀರಿ?
  - ಬೆಳಗ್ಗೆ ಏಳುವುದು.
  - ನಿತ್ಯ ಕರ್ಮಗಳನ್ನು ಮಾಡುವುದು.
  - ಪಾಠ ಓದುವುದು.
  - ಪತ್ರಿಕೆ ಓದುವುದು.
  - ಆಹಾರವನ್ನು ಸೇವಿಸುವುದು.
  - ಶಾಲೆಗೆ ಹೋಗುವುದು.
  - ಶಾಲಾ ಅಸೆಂಬ್ಲಿಯಲ್ಲಿ.
    ಭಾಗವಹಿಸುವುದು.
  - ಕಲಿಕಾ ಚಟುವಟಿಕೆಗಳು.
  - ಮಧ್ಯಾಹ್ನ ಊಟ ಮಾಡುವುದು.
  - ರಾಷ್ಟ್ರಗೀತೆ ಹಾಡುವುದು.
  - ಸಂಜೆ ಆಡುವುದು.
  - ರಾತ್ರಿ ಪಾಠ ಓದುವುದು.
  - ದಿನಚರಿ ಬರೆಯುವುದು.
  - ನಿದ್ದೆ ಮಾಡುವುದು.




- ನಿಮ್ಮ ತಾಯಿ ಒಂದು ದಿನದಲ್ಲಿ ಯಾವ ಯಾವ ಕೆಲಸಗಳನ್ನು ಮಾಡುತ್ತಾಳೆ? ಅಮ್ಮನಲ್ಲಿ ಕೇಳಿ ಬರೆಯುತ್ತೀರಿ ತಾನೆ?
  - 
  - 
  - 
  - 







## ಸಮಯ

ಶಾಲೆಗೆ ಹೋಗಲು ಸಮಯವಾಯಿತೆಂದು ಗಡಿಯಾರ ನೋಡಿ ಅಮ್ಮ ನಿಮ್ಮಲ್ಲಿ ಹೇಳುವುದಿಲ್ಲವೆ? ಶಾಲೆಯಲ್ಲಿ ಗಂಟೆ ಬಾರಿಸುವುದು ಗಡಿಯಾರ ನೋಡಿಯಲ್ಲವೆ? ಕೆಲವು ಸಮಯಗಳನ್ನೂ ಆ ಸಮಯಗಳಲ್ಲಿ ಗಡಿಯಾರದ ಮುಳ್ಳುಗಳ ಸ್ಥಾನವನ್ನೂ ನೋಡಿರಿ.


9 ಗಂಟೆ




9 ಗಂಟೆ 5 ಮಿನಿಟು




9 ಗಂಟೆ 10 ಮಿನಿಟು




9 ಗಂಟೆ 15 ಮಿನಿಟು




9 ಗಂಟೆ 20 ಮಿನಿಟು




9 ಗಂಟೆ 25 ಮಿನಿಟು




9ಗಂಟೆ 30 ಮಿನಿಟು




9 ಗಂಟೆ 35 ಮಿನಿಟು




9 ಗಂಟೆ 40 ಮಿನಿಟು




9 ಗಂಟೆ 45 ಮಿನಿಟು




9 ಗಂಟೆ 50 ಮಿನಿಟು



9ಗಂಟೆ 55 ಮಿನಿಟು





ಮಿನಿಟು ಮುಳ್ಳು 12 ರಿಂದ ಪ್ರಾರಂಭಿಸಿ ಪುನಃ 12ಕ್ಕೆ ತಲುಪಲು 60 ಮಿನಿಟುಗಳ ಸಮಯ ಬೇಕು. 60 ಮಿನಿಟುಗಳು ಎಂದರೆ 1 ಗಂಟೆ ಆಗಿದೆ.

## ನನ್ನ ದಿನ












ನಾನು ಬೆಳಗ್ಗೆ [ 7 ಗಂಟೆಗೆ ] ಎದ್ದು [ ] ಮುಂಚಿತವಾಗಿ ನಿತ್ಯ ಕರ್ಮಗಳನ್ನು ಮಾಡಿ ಚಹಾ ಕುಡಿಯುತ್ತೇನೆ. [ ] ನಂತರ ನಾನು ಶಾಲೆಗೆ ಹೋಗುತ್ತೇನೆ. ಎರಡು ಪಿರಿಯಡುಗಳ ಬಳಿಕ ಒಂದು ಸಣ್ಣ ವಿರಾಮ ವೇಳೆಯಿದೆ. [ ] ರಿಂದ [ ] ಯವರೆಗೆ ಮಧ್ಯಾಹ್ನದ ಊಟದ ಸಮಯವಾಗಿದೆ. [ ] ಶಾಲೆ ಬಿಟ್ಟರೆ [ ] ಮುಂಚಿತವಾಗಿ ನಾನು ಮನೆಗೆ ತಲುಪುವೆನು. [ ] ಬಳಿಕ ಪಠ್ಯ ಭಾಗಗಳನ್ನು ಓದಿ [ ] ನಿದ್ರಿಸುತ್ತೇನೆ.






## ಸಮಯವನ್ನು ಬರೆಯಬಹುದೇ?

## ಸಮಯ ಮುಳ್ಳುಗಳನ್ನು ರಚಿಸೋಣ



10 ಗಂಟೆ 11 ಮಿನಿಟು




6 ಗಂಟೆ 20 ಮಿನಿಟು



2 ಗಂಟೆ 47 ಮಿನಿಟು


## ಓಟದ ಸ್ಪರ್ಧೆ

ಅರಣ್ಯ ದಿನಾಚರಣೆಯ ಅಂಗವಾಗಿ ಕಾಡಿನಲ್ಲಿ ಓಟದ ಸ್ಪರ್ಧೆ ನಡೆಯುತ್ತದೆ.




ಚಿನ್ನು ಜಿಂಕೆ 1 ಮಿನಿಟಿನಲ್ಲೂ, ಚಿಂದು ಮೊಲ 2 ಮಿನಿಟಿನಲ್ಲೂ ಗುರಿಯನ್ನು ತಲುಪಿತು. ಆದರೆ ಚಿಂಜು ನರಿಗೆ 3 ಮಿನಿಟೂ ಚಿಂಡು ಮಂಗನಿಗೆ 4 ಮಿನಿಟೂ ಬೇಕಾಯಿತು. 10 ಗಂಟೆಗೆ ಸರಿಯಾಗಿ ಸ್ಪರ್ಧೆ ಆರಂಭವಾಗಿತ್ತು. ಪ್ರತಿಯೊಬ್ಬರೂ ಗುರಿಯನ್ನು ತಲುಪಿದ ಸಮಯವನ್ನು ಗುರುತಿಸಿರಿ.

| | | |
|---|---|---|
| ಚಿನ್ನು ಜಿಂಕೆ | - | 10 ಗಂಟೆ 1 ಮಿನಿಟು |
| ಚಿಂದು ಮೊಲ | - | 10 ಗಂಟೆ 2 ಮಿನಿಟು |
| ಚಿಂಜು ನರಿ | - | 10 ಗಂಟೆ 3 ಮಿನಿಟು |
| ಚಿಂಡು ಮಂಗ | - | 10 ಗಂಟೆ 4 ಮಿನಿಟು |




ನಾವು ಇದನ್ನು ಗಡಿಯಾರದಲ್ಲಿ ತೋರಿಸೋಣ.

ಚಿನ್ನು



ಚಿಂದು



ಚಿಂಜು





ಚಿಂಡು



10 ಗಂಟೆ 1 ಮಿನಿಟು

## ಒಂದು ನಿಮಿಷ








ಮಿನಿಟಿಗಿಂತ ಕಡಿಮೆ ಸಮಯವನ್ನು ಸೂಚಿಸಲು ಸೆಕೆಂಡನ್ನು ಉಪಯೋಗಿಸುತ್ತೇವೆ.









**ಕೈಗಡಿಯಾರದ ಸಮಯವನ್ನು ಕ್ರಮೀಕರಿಸುವ**

ಉಪಯೋಗಿಸಬೇಕಾದ ಸೋಫ್ಟ್‌ವೇರ್: ಐ.ಟಿ.@ಸ್ಕೂಲ್ ಗ್ನು–ಲಿನಕ್ಸ್‌ನ ಜಿಕೋಂಪ್ರಿಸ್. ಸೋಫ್ಟ್‌ವೇರ್ ತೆರೆಯಲಿರುವ ದಾರಿ: ಜಿ.ಕೋಂಪ್ರಿಸ್ ತೆರೆದು ಕಂಡುಹಿಡಿಯಬಹುದೇ → ಹಲವು ವಿಧದ ಆಟಗಳು → ಗಡಿಯಾರದ ಕಲಿಕೆ


## ಎಷ್ಟು ಗಂಟೆ?

- ಬೆಳಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆ ವರೆಗೆ ☐ ಗಂಟೆಗಳು
- ಬೆಳಗ್ಗೆ 10 ಗಂಟೆಯಿಂದ ಸಂಜೆ 4 ಗಂಟೆ ವರೆಗೆ ☐ ಗಂಟೆಗಳು.
- ಬೆಳಗ್ಗೆ 6 ಗಂಟೆಯಿಂದ ಮಧ್ಯಾಹ್ನ 1 ಗಂಟೆ ವರೆಗೆ ☐ ಗಂಟೆಗಳು.
- ಮಧ್ಯಾಹ್ನ 12 ಗಂಟೆಯಿಂದ ಮಧ್ಯ ರಾತ್ರಿ 12 ಗಂಟೆಯ ವರೆಗೆ ☐ ಗಂಟೆಗಳು
- ಬೆಳಗ್ಗೆ 7 ಗಂಟೆಯಿಂದ ಮರುದಿನ ಬೆಳಗ್ಗೆ 7ರ ವರೆಗೆ ☐ ಗಂಟೆಗಳು




## ನನ್ನ ದೂರ ಮತ್ತು ಸಮಯ

ಅಜಿತನು ಮನೆಯಿಂದ 9 ಗಂಟೆ 30 ಮಿನಿಟಿಗೆ ಹೊರಟು 20 ಮಿನಿಟನಲ್ಲಿ ಶಾಲೆಗೆ ತಲುಪುವನು.







ಅಜಿತನು ಶಾಲೆಗೆ ಎಷ್ಟು ಗಂಟೆಗೆ ತಲುಪಿದನು?

- ನಿಮ್ಮ ಸಹಪಾಠಿಗಳು ಪ್ರತಿಯೊಬ್ಬರು ಮನೆಯಿಂದ ಶಾಲೆಗೆ ತಲುಪಲು ತೆಗೆದುಕೊಂಡ ಸಮಯವನ್ನು ಇದೇ ರೀತಿಯಲ್ಲಿ ಹೇಳಬಹುದೇ?

| ನಂಬ್ರ | ಹೆಸರು | ಹೊರಡುವ ಸಮಯ | ತಲುಪುವ ಸಮಯ | ತೆಗೆದುಕೊಂಡ ಸಮಯ |
|---|---|---|---|---|
| 1 | | | | |
| 2 | | | | |
| 3 | | | | |
| 4 | | | | |
| 5 | | | | |

## ಶಾಲಾ ವಾರ್ಷಿಕೋತ್ಸವ





ಹಾಗಾದರೆ ಈಗ ಸಮಯವೆಷ್ಟು?

## ರೈಲು ನಿಲ್ದಾಣ




- ಹಾಗಾದರೆ ರೈಲು ಎಷ್ಟು ಗಂಟೆಗೆ ತಲುಪಬಹುದು?

## ಕಾರಿನಲ್ಲಿ ಪ್ರಯಾಣ




- ಒಟ್ಟು ಎಷ್ಟು ಸಮಯ ಕಾರು ಓಡಿಸಿದರು?

**ನಾನು ಕಂಡುಕೊಂಡ ವಿಧಾನ**




**ಸಹಪಾಠಿಗಳು ಕಂಡುಕೊಂಡ ವಿಧಾನ**




## ರೈಲಿನಲ್ಲಿ ಪ್ರಯಾಣ

ತಿರುವನಂತಪುರದಿಂದ ವೇನಾಡ್ ಎಕ್ಸ್‌ಪ್ರೆಸ್ ಬೆಳಗ್ಗೆ 5 ಗಂಟೆಗೆ ಪ್ರಯಾಣ ಆರಂಭಿಸಲಿದೆ. ಮಧ್ಯಾಹ್ನ 12.45ಕ್ಕೆ ಶೋರ್ನೂರಿಗೆ ತಲುಪಲಿದೆ.



- ಪ್ರಯಾಣ ಮಾಡಲು ತೆಗೆದುಕೊಳ್ಳುವ ಸಮಯವೆಷ್ಟು?

## ಯಾರು ಮೊದಲು?



ಒಂದು ರೈಲು ಗಾಡಿ ತಿರುವನಂತಪುರದಿಂದ ಬೆಳಿಗ್ಗೆ 7.30ಕ್ಕೆ ಹೊರಟು ಆಲಪ್ಪುಳ ದಾರಿಯಾಗಿ ಎರ್ನಾಕುಳಂಗೆ 11.35ಕ್ಕೆ ತಲುಪುತ್ತದೆ. ಇನ್ನೊಂದು ರೈಲು ತಿರುವನಂತಪುರದಿಂದ ಸಂಜೆ 5 ಗಂಟೆಗೆ ಹೊರಟು ಕೋಟ್ಟಯಂ ದಾರಿಯಾಗಿ ರಾತ್ರಿ 9.55 ಕ್ಕೆ ಎರ್ನಾಕುಳಂಗೆ ತಲುಪುತ್ತದೆ.

- ಪ್ರತಿಯೊಂದು ರೈಲು ಗಾಡಿಯು ಪ್ರಯಾಣಕ್ಕೆ ತೆಗೆದುಕೊಂಡ ಸಮಯವೆಷ್ಟು?
- ಸಮಯಗಳೊಳಗಿನ ವ್ಯತ್ಯಾಸವೆಷ್ಟು?


## ಪ್ರಯಾಣ ಮತ್ತು ಸಮಯ

ಶೈಕ್ಷಣಿಕ ಪ್ರವಾಸದ ಕುರಿತು ವಿಜಯಮ್ಮ ಟೀಚರ್ ಹೀಗೆ ಹೇಳಿದರು.

ಬೆಳಗ್ಗೆ 7.30ಕ್ಕೆ ಪ್ರಯಾಣ ಆರಂಭವಾಗಲಿದೆ. 1 ಗಂಟೆ ಪ್ರಯಾಣ ಮಾಡಿದರೆ ಅಣೆಕಟ್ಟು ಇರುವ ಸ್ಥಳಕ್ಕೆ ತಲುಪುವೆವು. ಅಲ್ಲಿಯ ದೃಶ್ಯಗಳನ್ನು ನೋಡಲು 1 ಗಂಟೆ ಉಪಯೋಗಿಸುತ್ತೇವೆ. ಅಲ್ಲಿಂದ 30 ಮಿನಿಟು ಪ್ರಯಾಣ ಮಾಡಿದರೆ ಮೃಗಾಲಯಕ್ಕೆ ತಲುಪುವೆವು. ನಾವು ಇದುವರೆಗೆ ಕಂಡಿರುವ ಮತ್ತು ಕಾಣದಿರುವ ಮೃಗಗಳನ್ನೂ ಪಕ್ಷಿಗಳನ್ನೂ ನೋಡುತ್ತಾ 2 ಗಂಟೆಗಳ ಕಾಲ ಮೃಗಾಲಯದೊಳಗೆ ಸುತ್ತಾಡುವೆವು. ಆ ಬಳಿಕ 30 ಮಿನಿಟು ಪ್ರಯಾಣ ಮಾಡಿ ವಿಜ್ಞಾನ ಮ್ಯೂಸಿಯಂಗೆ (ವಸ್ತು ಸಂಗ್ರಹಾಲಯ) ತಲುಪುವೆವು. ಅಲ್ಲಿಯ ಕುತೂಹಲಕರವಾದ ದೃಶ್ಯಗಳನ್ನು ಕಾಣಲು 1 ಗಂಟೆಯ ಸಮಯವಿದೆ. ಅನಂತರದ 45 ಮಿನಿಟಿನಲ್ಲಿ ಊಟ ಮಾಡಿ ಅಲ್ಲಿಂದ ಹೊರಡುವೆವು. 45 ಮಿನಿಟು ಪ್ರಯಾಣ ಮಾಡಿ ಇತಿಹಾಸಕ್ಕೆ ಸಂಬಂಧಿಸಿದ ಮ್ಯೂಸಿಯಂಗೆ ತಲುಪುವೆವು. ಅಲ್ಲಿಯ ಪುರಾತನ ವಸ್ತು ಸಂಗ್ರಹಗಳನ್ನೂ ಕಾಣುವೆವು. ಒಂದು ಗಂಟೆ ಸಮಯವನ್ನು ಅಲ್ಲಿ ಕಳೆಯುವೆವು. ಬಳಿಕ 15 ಮಿನಿಟು ಪ್ರಯಾಣ ಮಾಡಿ ಸಮುದ್ರ ತೀರಕ್ಕೆ ಹೋಗುವೆವು. ಅಲ್ಲಿ ನಿಮಗೆ ಹಾಡಿ, ಕುಣಿದು ಸಂತೋಷಪಡಲು 2 ಗಂಟೆಗಳ ಕಾಲ ಸಮಯವಿದೆ. ಆ ಬಳಿಕ 1 ಗಂಟೆಯ ಕಾಲ ಪ್ರಯಾಣ ಮಾಡಿ ನಮ್ಮ ಶಾಲೆಗೆ ಮರಳಿ ತಲುಪುವೆವು.

- ವಿಜಯಮ್ಮ ಟೀಚರ್ ಹೇಳಿದ್ದು ಕೇಳಿದಿರಲ್ಲವೆ? ಈ ಕಾರ್ಯಕ್ರಮವನ್ನು ಒಂದು ಪಟ್ಟಿಯಲ್ಲಿ ಬರೆದು ನೋಡುವ.
- ಪ್ರಯಾಣ ಮಾಡಿದ ಸಮಯ ಮತ್ತು ವಿವಿಧ ಸ್ಥಳಗಳಲ್ಲಿ ವಿನಿಯೋಗಿಸಿದ ಸಮಯವನ್ನು ಪ್ರತ್ಯೇಕ ಪ್ರತ್ಯೇಕವಾಗಿ ಪಟ್ಟಿಯಲ್ಲಿ ಬರೆದರೋ?





## ಪ್ರಯಾಣ ವಿವರ ಪಟ್ಟಿ

| ಹೊರಡುವ ಸ್ಥಳ ಸಮಯ | ತಲುಪಿದ ಸ್ಥಳ ಸಮಯ | ಪ್ರಯಾಣಕ್ಕೆ ತಗಲಿದ ಸಮಯ |
|---|---|---|
| ಶಾಲೆ : 7.30 | ಅಣೆಕಟ್ಟು : 8.30 | 1 ಗಂಟೆ |
| ಅಣೆಕಟ್ಟು : 9.30 | ಮೃಗಾಲಯ : 10.00 | |
| | | |
| | | |
| | | |
| | | |

### ಸಂದರ್ಶನ ಸಮಯ


| ತಲುಪಿದ ಸ್ಥಳ ಸಮಯ | ಹೊರಡುವ ಸಮಯ | ವಿನಿಯೋಗಿಸಿದ ಸಮಯ |
|---|---|---|
| ಅಣೆಕಟ್ಟು : 8.30 | 9.30 | 1 ಗಂಟೆ |
| ಮೃಗಾಲಯ : 10.00 | | |
| | | |
| | | |
| | | |
| | | |

- ವಿಜ್ಞಾನ ಮ್ಯೂಸಿಯಂಗೆ ತಲುಪಿದ್ದು ಎಷ್ಟು ಗಂಟೆಗೆ?
- ಮಧ್ಯಾಹ್ನದ ಊಟ ಮಾಡಿದ್ದು ಎಷ್ಟು ಗಂಟೆಗೆ?

ಪಟ್ಟಿಯನ್ನು ಆಧಾರವಾಗಿರಿಸಿ ಗೆಳೆಯನಲ್ಲಿ ಕೇಳಲು ಕೆಲವು ಪ್ರಶ್ನೆಗಳನ್ನು ತಯಾರಿಸಿರಿ.

## ಕೆಲಸದ ಸಮಯ


ಒಂದೇ ಕೆಲಸವನ್ನು 3 ಜನರು ಮಾಡಿ ಮುಗಿಸಿದ ಸಮಯವನ್ನು ವಿಭಿನ್ನ ರೀತಿಯಲ್ಲಿ ಹೇಳಿದರು.




ಅತಿ ಹೆಚ್ಚು ಸಮಯ ಕೆಲಸ ಮಾಡಿದ್ದು ಯಾರು?

**ನಾನು ಕಂಡುಕೊಂಡ ವಿಧಾನ**








| | |
|---|---|
| ಏನನ್ನು ಕಂಡುಹಿಡಿಯಬೇಕೆಂದು ನನಗೆ ತಿಳಿಯಿತು. | |
| ಗಂಟೆ, ಮಿನಿಟುಗಳ ಸಂಬಂಧವನ್ನು ಉಪಯೋಗಿಸಿ ಸಮಯವನ್ನು ಕಂಡುಹಿಡಿದೆನು. | |
| ಸಮಯವನ್ನು ಕಂಡು ಹಿಡಿದ ರೀತಿಯನ್ನು ಸ್ಪಷ್ಟಪಡಿಸಲು ಸಾಧ್ಯವಾಯಿತು. | |


## ನಾವು ಕಂಡುಹಿಡಿಯುವ

- ನಿಮ್ಮ ಹುಟ್ಟಿದ ದಿನ ಯಾವ ತಿಂಗಳಿನಲ್ಲಿ?
- ವರ್ಷದ ಮೊದಲ ತಿಂಗಳು ಯಾವುದು?
- ಬೇಸಗೆ ರಜೆ ಮುಗಿದು ಶಾಲೆ ಪ್ರಾರಂಭವಾಗುವುದು ಯಾವ ತಿಂಗಳಲ್ಲಿ?
- ಈ ವರ್ಷ 5 ಆದಿತ್ಯವಾರಗಳುಳ್ಳ ತಿಂಗಳುಗಳು ಯಾವುವು?
- ಈ ವರ್ಷ ಸ್ವಾತಂತ್ರ್ಯ ದಿನ ಯಾವ ವಾರ?
- 30 ಕ್ಕಿಂತ ಕಡಿಮೆ ದಿನಗಳಿರುವ ತಿಂಗಳು ಯಾವುದು?
- 31 ದಿನಗಳಿರುವ ತಿಂಗಳುಗಳು ಎಷ್ಟು?
- 30 ದಿನಗಳಿರುವ ತಿಂಗಳುಗಳೆಷ್ಟು?
- ಈ ವರ್ಷ ಒಟ್ಟು ಎಷ್ಟು ದಿನಗಳಿವೆ?



## ಆಚರಣೆಗಳು

- ಪಟ್ಟಿಯಲ್ಲಿ ನೀಡಿರುವ ಆಚರಣೆಗಳು ಯಾವ ತಿಂಗಳಿನಲ್ಲಿ ಬರುತ್ತದೆ ಎಂದು ಕಂಡುಹಿಡಿಯಿರಿ.





| ಆಚರಣೆಗಳು | ಇಂಗ್ಲಿಷ್ ತಿಂಗಳು |
|---|---|
| • ಓಣಂ | |
| • ಕ್ರಿಸ್‌ಮಸ್ | |
| • ವಿಷು | |
| • ಬಕ್ರೀದ್ | |
| • ಸ್ವಾತಂತ್ರ್ಯದಿನ | |
| • ಪ್ರಜಾಪ್ರಭುತ್ವ ದಿನ | |
| • ಗಾಂಧೀ ಜಯಂತಿ | |
| • ಮಕ್ಕಳ ದಿನ | |
| • ಕೇರಳ ರಾಜ್ಯೋತ್ಸವ | |
| • ಶಿಕ್ಷಕರ ದಿನ | |
| • ಪರಿಸರ ದಿನ | |
| • | |
| • | |
| • | |

## ಸೌರಮಾನ ತಿಂಗಳು




ಮಿನ್ನುವಿನ ಜನ್ಮದಿನ ಸೌರಮಾನದ ಯಾವ ತಿಂಗಳಿನಲ್ಲಿ ಬರುತ್ತದೆ?

- ಕ್ಯಾಲೆಂಡರ್ ನೋಡಿ ಇಂಗ್ಲಿಷ್ ತಿಂಗಳು ಮತ್ತು ಸೌರಮಾನ ತಿಂಗಳನ್ನು ಗುರುತಿಸಿ ಬರೆಯಿರಿ.





## ಹೇಗೆ ಹೇಳಬಹುದು?

ಕೆಳಗಿನವುಗಳಿಗೆ ತೆಗೆದುಕೊಳ್ಳುವ ಸಮಯವನ್ನು ನಮಗೆ ಹೇಗೆ ಹೇಳಬಹುದು?

| | |
|---|---|
| • ಗಿಡ ಬೆಳೆದು ಮರವಾಗಲು. | ವರ್ಷಗಳು |
| • ಬೇಸಗೆ ರಜೆ ಕಳೆದು ಶಾಲೆ ಪ್ರಾರಂಭವಾಗಲು. | |
| • ಕೋಳಿ ಮೊಟ್ಟೆ ಒಡೆದು ಮರಿಯಾಗಲು. | ದಿನಗಳು |
| • ಮಾವು ಹೂ ಬಿಟ್ಟು ಮಾವಿನ ಮಿಡಿಯಾಗಲು. | |
| • ಮಾವಿನ ಮಿಡಿ ಬೆಳೆದು ಬಲಿತು ಹಣ್ಣಾಗಲು. | |
| • ಸೂರ್ಯನು ಉದಯಿಸಿ ಸಂಜೆ ಅಸ್ತಮಿಸಲು. | |
| • ಶಾಲೆಯಿಂದ ಮರಳಿ ಮನೆಗೆ ತಲುಪಲು. | |
| • ಶಾಲೆಯಲ್ಲಿ ಪ್ರಾರ್ಥನೆ ಮಾಡಲು. | |
| • ಬೆಳಗ್ಗಿನ ತಿಂಡಿ ತಿನ್ನಲು. | |
| • 1 ರಿಂದ 50 ರ ವರೆಗೆ ಎಣಿಸಲು. | |
| • ಕಪ್ಪೆ ಒಂದು ಜಿಗಿತ ಜಿಗಿಯಲು. | |

## ಪುನರವಲೋಕನ




| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| **1. ನೂರಕ್ಕೂ ಆಚೆಗೆ**<br>• 999ರ ವರೆಗಿರುವ ಸಂಖ್ಯೆಗಳನ್ನು ಓದುವುದು. | | | |
| • 999ರ ವರೆಗಿನ ಸಂಖ್ಯೆಗಳನ್ನು ವಿಭಿನ್ನ ರೀತಿಯಲ್ಲಿ ವ್ಯಾಖ್ಯಾನಿಸುವುದು. | | | |
| • ಸಂಖ್ಯೆಗಳನ್ನು ಸ್ಥಾನ ಬೆಲೆಗನುಸಾರವಾಗಿ ಬಿಡಿಸಿ ಬರೆಯುವುದು. | | | |
| • ಮೂರು ಅಂಕೆಗಳನ್ನು ಉಪಯೋಗಿಸಿ ವಿಭಿನ್ನವಾದ ಮೂರಂಕೆ ಸಂಖ್ಯೆಗಳನ್ನು ರಚಿಸುವುದು. | | | |
| • ಮೂರಂಕೆ ಸಂಖ್ಯೆಗಳಲ್ಲಿ ದೊಡ್ಡ ಮತ್ತು ಚಿಕ್ಕ ಸಂಖ್ಯೆಗಳನ್ನು ಗುರುತಿಸುವುದು. | | | |
| • ಮೂರಂಕೆ ಸಂಖ್ಯೆಗಳನ್ನು ಆರೋಹಣ ಮತ್ತು ಅವರೋಹಣ ಕ್ರಮದಲ್ಲಿ ಕ್ರಮೀಕರಿಸುವುದು. | | | |
| • ಸ್ಥಾನ ಬೆಲೆಯನ್ನು ಸೂಚಿಸಲು ಸಂಖ್ಯೆಗಳನ್ನು ಉಪಯೋಗಿಸುವುದು. | | | |
| • ಸಮಸ್ಯೆಯನ್ನು ಪರಿಹರಿಸಲು ಮೂರಂಕೆ ಸಂಖ್ಯೆಗಳನ್ನು ಬಳಸುವುದು. | | | |
| • ಸಂಖ್ಯಾ ಕ್ರಮದಲ್ಲಿರುವ ಯುಕ್ತಿಯನ್ನು ವಿವರಿಸುವುದು ಮತ್ತು ಹೊಸ ಸಂಖ್ಯಾ ಕ್ರಮವನ್ನು ಕಂಡುಕೊಳ್ಳುವುದು. | | | |
| **2. ಒಟ್ಟು ಸೇರಿಸುವ**<br>• ಒಂದು ಸಂಖ್ಯೆಯನ್ನು ವಿಭಿನ್ನ ಸಂಖ್ಯೆಗಳ ಮೊತ್ತವಾಗಿ ವಿಭಿನ್ನ ರೀತಿಯಲ್ಲಿ ಬರೆಯುವುದು. | | | |
| • ಒಂದು ಮೂರಂಕೆ ಸಂಖ್ಯೆಯೊಂದಿಗೆ ಮತ್ತೊಂದು ಸಂಖ್ಯೆಯನ್ನು ಕೂಡಿಸುವುದಕ್ಕಿರುವ ರೀತಿಗಳನ್ನು ವಿವರಿಸುವುದು. | | | |
| • ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸಲು ಸಂಕಲನ ಕ್ರಿಯೆ ಉಪಯೋಗಿಸುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| • ಸಮಸ್ಯೆಗಳ ಪರಿಹಾರಕ್ಕಾಗಿ ವಿಭಿನ್ನ ರೀತಿಗಳನ್ನು ವಿವರಿಸುವುದು. | | | |
| • ಸಂಖ್ಯೆಗಳ ವೈಶಿಷ್ಟ್ಯಗಳನ್ನು ಪರೀಕ್ಷಿಸಿ ಸಂಖ್ಯಾ ಸಂಬಂಧಗಳ ಕುರಿತು ನಿಗಮನಗಳನ್ನು ರೂಪಿಸುವುದು. | | | |
| • ಸಂಖ್ಯಾಕ್ರಮಗಳ ಯುಕ್ತಿಯನ್ನು ವಿವರಿಸುವುದು. | | | |
| **3. ತೆಗೆಯುವ**<br>• ಒಂದು ಸಂಖ್ಯೆಯಿಂದ ಇನ್ನೊಂದು ಸಂಖ್ಯೆಯನ್ನು ಕಳೆಯಲಿರುವ ರೀತಿಯನ್ನು ವಿವರಿಸುವುದು. | | | |
| • ಪ್ರಾಯೋಗಿಕ ಸಮಸ್ಯೆಗಳನ್ನು ಪರಿಹರಿಸಲು ವ್ಯವಕಲನ ಕ್ರಿಯೆಯನ್ನು ಉಪಯೋಗಿಸುವುದು. | | | |
| • ಸಮಸ್ಯೆಗಳ ಪರಿಹಾರಕ್ಕಿರುವ ವಿಭಿನ್ನ ರೀತಿಗಳನ್ನು ವಿವರಿಸುವುದು. | | | |
| • ವ್ಯವಕಲನ ಕ್ರಿಯೆಯಲ್ಲಿರುವ ಉತ್ತರ ಸರಿಯಾಗಿದೆಯೋ ಎಂದು ಪರೀಕ್ಷಿಸಲಿರುವ ರೀತಿಯನ್ನು ಸಮರ್ಥಿಸುವುದು. | | | |
| • ಸಂಖ್ಯೆಗಳ ವಿಶೇಷತೆಗಳಿಗೆ ಸಂಬಂಧಿಸಿ ನಿಗಮನಗಳನ್ನು ರೂಪೀಕರಿಸುವುದು. | | | |
| • ಸಂಖ್ಯಾಕ್ರಮಗಳ ಯುಕ್ತಿಯನ್ನು ವಿವರಿಸುವುದು. | | | |
| **4. ಆಕೃತಿಗಳು ಸೇರುವಾಗ**<br>• ಸುತ್ತುಮುತ್ತಲಿರುವ ಆಕೃತಿಗಳಿಂದ ಆಯತ, ತ್ರಿಕೋನ, ಉರುಟು ಇವುಗಳನ್ನು ಗುರುತಿಸುವುದು. | | | |
| • ಆಯತ, ತ್ರಿಕೋನ ಮತ್ತು ಉರುಟುಗಳನ್ನು ಉಪಯೋಗಿಸಿ ಅನೇಕ ಆಕೃತಿಗಳನ್ನು ಮಾಡುವುದು. | | | |
| • ಟೇನ್‌ಗ್ರಾಂ ತುಂಡುಗಳನ್ನು ಉಪಯೋಗಿಸಿ ಆಕೃತಿಗಳನ್ನು ರಚಿಸುವುದು. | | | |
| • ತ್ರಿಮಾನ ಆಕೃತಿಗಳನ್ನು ರಚಿಸುವುದು. | | | |
| • ನಿಖರತೆಯೊಂದಿಗೆ ಅಳೆಯುವುದು. | | | |

| ಕಲಿಕಾ ಸಾಧನೆಗಳು | ನನಗೆ ಸಾಧ್ಯ | ಟೀಚರ ಸಹಾಯದೊಂದಿಗೆ ಸಾಧ್ಯ | ಇನ್ನೂ ಉತ್ತಮ ಪಡಿಸಬೇಕಾಗಿದೆ |
|---|---|---|---|
| **5. ಸಮಾನರು ಒಟ್ಟಾಗುವಾಗ**<br>• ಪ್ರಾಯೋಗಿಕ ಸಂದರ್ಭಗಳ ಮೂಲಕ ಗುಣಾಕಾರದ ಸತ್ಯಾಂಶಗಳನ್ನು ರೂಪೀಕರಿಸುವುದು. | | | |
| • ಪ್ರಾಯೋಗಿಕ ಸಂದರ್ಭಗಳಲ್ಲಿ ಸಮಸ್ಯಾ ಪರಿಹಾರಕ್ಕಾಗಿ ಗುಣಾಕಾರದ ಸತ್ಯಾಂಶವನ್ನು ಉಪಯೋಗಿಸುವುದು. | | | |
| • ಪ್ರಾಯೋಗಿಕ ಸಮಸ್ಯೆಗಳ ಪರಿಹಾರಕ್ಕಾಗಿ ಗುಣಾಕಾರ ಕ್ರಿಯೆಗಳನ್ನು ಉಪಯೋಗಿಸುವುದು. | | | |
| • ಗುಣಾಕಾರ ಕ್ರಿಯೆಗೆ ಸಂಬಂಧಿಸಿದ ಸಂಖ್ಯಾ ಸಂಬಂಧಗಳನ್ನು ಕಂಡುಕೊಂಡು ವಿವರಿಸುವುದು. | | | |
| **6. ಸಮಯ ಮತ್ತು ಕಾಲ**<br>• ವಾಚು / ಗಡಿಯಾರವನ್ನು ನೋಡಿ ಗಂಟೆ ಹೇಳುವುದು. | | | |
| • ಎರಡು ಸಮಯಗಳೊಳಗಿನ ಅಂತರವನ್ನು ಲೆಕ್ಕ ಹಾಕುವುದು. | | | |
| • ಗಂಟೆ ಮತ್ತು ಮಿನಿಟುಗಳೊಳಗಿನ ಪರಸ್ಪರ ಸಂಬಂಧಗಳನ್ನು ವಿವರಿಸುವುದು. | | | |
| • ಆಯೋಜಿಸುವುದಕ್ಕಾಗಿ ವೇಳಾಪಟ್ಟಿಯನ್ನು ನಿರ್ಮಿಸುವುದು. | | | |
| • ಕ್ಯಾಲೆಂಡರ್ ನೋಡಿ ಇಂಗ್ಲಿಷ್, ಸೌರಮಾನ ತಿಂಗಳುಗಳ ತಾರೀಕುಗಳನ್ನು, ವಿಶೇಷ ದಿನಗಳನ್ನು ಕಂಡುಕೊಳ್ಳುವುದು. | | | |